## ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಸಾಕಮ್ಮ ನಾಗರಾಜು ರವರ ಅಧ್ಯಕ್ಷತೆಯಲ್ಲಿ ದಿನಾಂಕ 30-12-2013 ರಂದು ಬೆಳಗ್ಗೆ 11.00 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು

*******

**ಹಾಜರಿ : ಹಾಜರಾತಿ ವಹಿಯಲ್ಲಿದ್ದಂತೆ.**

*********

ಸಭೆಯ ಆರಂಭದಲ್ಲಿ ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯತ್, ತುಮಕೂರು ಇವರು ಮಾತನಾಡಿ,ಸಭೆಯ ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು/ಲೋಕಸಭಾ ಸದಸ್ಯರು/ವಿಧಾನಸಭಾ ಸದಸ್ಯರು/ ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳು, ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನು ಸಭೆಗೆ ಸ್ವಾಗತಿಸಿ, ಮಾನ್ಯ ಅಧ್ಯಕ್ಷರು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ವಿನಂತಿಸಿದರು.

ಅದರಂತೆ, ಸಭೆಯ ಮಾನ್ಯ ಅಧ್ಯಕ್ಷರ ಸೂಚನೆ ಮೇರೆಗೆ, ಇತ್ತೀಚೆಗೆ ನಿಧನರಾದ ಮೈಸೂರು ಅರಸು ವಂಶದ ಮಹಾರಾಜ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮತ್ತು ರಾಷ್ಟ್ರಕವಿ ಶ್ರೀ ಜಿ.ಎಸ್.ಶಿವರುದ್ರಪ್ಪರವರು ದೈವಾಧೀನರಾಗಿರುವ ಹಿನ್ನಲೆಯಲ್ಲಿ ಅವರುಗಳ ಗೌರವಾರ್ಥ ಸಭೆಯಲ್ಲಿ 1 ನಿಮಿಷ ಮೌನವನ್ನು ಆಚರಿಸುವ ಮೂಲಕ ಸಂತಾಪ ಸೂಚಿಸಿ, ನಂತರ ವಿಷಯವಹಿ ಚರ್ಚೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಸದಸ್ಯರಾದ ಶ್ರೀ ಎನ್.ಆರ್.ಆನಂದರವಿರವರು ಮಾತನಾಡಿ, ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನದ ಮುಂದುವರೆದ ಕಾಮಗಾರಿಗಳಿಗೆ ಈವರೆವಿಗೂ ಹಣ ಪಾವತಿಯಾಗಿರುವುದಿಲ್ಲ, ಕೂಡಲೇ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಆದೇಶ ನೀಡಬೇಕು, ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ ಕೆಲಸ ಮಾಡಿರುವ ಕೂಲಿಗಾರರಿಗೆ 3-4 ತಿಂಗಳಾದರೂ ಹಣ ಪಾವತಿಯಾಗಿರುವುದಿಲ್ಲ, ಕ್ರಿಯಾ ಯೋಜನೆ ತುರ್ತಾಗಿ ತಯಾರಿಸಿ ಅನುಮೋದನೆ ನೀಡಿ ಹಣ ಪಾವತಿಸಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ತಿಪಟೂರು ತಾಲ್ಲೂಕಿನಲ್ಲಿ 3 ಗ್ರಾ.ಪಂ.ಗಳಲ್ಲಿ ಯಾವ ಕೂಲಿಗಾರರು ಕೆಲಸ ಬಯಸಿ ಬರುತ್ತಾರೋ ಅವರಿಗೆ ಕೆಲಸ ಕೊಡುವಂತೆ ಆಗ್ರಹಿಸಿದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಿಪಟೂರು ತಾ.ಪಂ.ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಪರಿಶೀಲಿಸಿ ಕೂಲಿ ಕೆಲಸಕ್ಕೆ ಬರುವ ಕೂಲಿಗಾರರಿಗೆ ಕೆಲಸ ನೀಡುವಂತೆ ಸೂಚಿಸಿದರು.

ಮುಂದುವರೆದು ಶ್ರೀ ಎನ್ ಆರ್ ಆನಂದರವಿ ರವರು ಮಾತನಾಡಿ, ತಾವು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಮಂಜೂರಾಗಿದ್ದ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನದ ಕಾಮಗಾರಿಗಳು 2013-14ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಾಗಿ ಜಿಲ್ಲಾ ಪಂಚಾಯತ್ ನಿಂದ ಅನುಮೋದನೆ ನೀಡದೆ ಇರುವುದರಿಂದ, ಮುಂದುವರೆದ ಕಾಮಗಾರಿಗಳಿಗೆ ಬಿಲ್ ಪಾವತಿಸುತ್ತಿಲ್ಲವೆಂದು ಸಭೆಯ ಗಮನಕ್ಕೆ ತರುತ್ತಾ, ಮುಂದುವರೆದ ಕಾಮಗಾರಿಗಳಿಗೆ ಮಂಜೂರಾತಿ ನೀಡಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರನ್ನು ಕೋರಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ ಮುಂದುವರೆದ ಕಾಮಗಾರಿಗಳಿಗೆ ಕಡ್ಡಾಯವಾಗಿ ಹಣ ಪಾವತಿಸಬೇಕಾಗಿದ್ದು, ಇದಕ್ಕೆ ಅನುಮೋದನೆ ನೀಡುವ ಅವಶ್ಯಕತೆ ಇರುವುದಿಲ್ಲ; ಆದುದರಿಂದ ಕೂಡಲೇ ಬಿಲ್ಲುಗಳನ್ನು ಪಾವತಿಸುವುದಕ್ಕೆ ಕ್ರಮ ವಹಿಸಲು ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು/ ಮಧುಗಿರಿ ರವರಿಗೆ ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ)**

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ಆರ್.ಸಿ.ಆಂಜಿನಪ್ಪರವರು ಮಾತನಾಡಿ, ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳ ಕೆಲಸಗಳು ಪೂರ್ಣಗೊಂಡಿರುವುದಿಲ್ಲ; ನಿಗಧಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸದಿದ್ದರೆ ಅದನ್ನು spil over ಮಾಡುತ್ತಾರೆ; ಅನುದಾನ ವ್ಯಪಗತವಾಗುವ ಸಂಭವವಿರುತ್ತದೆ; ಅಭಿವೃದ್ಧಿ ಕಾರ್ಯ ಕುಂಠಿತಗೊಳ್ಳುತ್ತದೆ; ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸ್ಪಷ್ಟ ಆದೇಶ ನೀಡಬೇಕು; ಹಾಗೂ ಕ್ರಿಯಾ ಯೋಜನೆ ಅನುಮೋದನೆ ಆಗಿರುತ್ತದೆ ಎಂದು ಸಭೆಗೆ ತಿಳಿಸಿದರು

ಮುಖ್ಯ ಕಾರ್ಯನಿರ್ವಾಹಕಅಧಿಕಾರಿಯವರು ಮಾತನಾಡಿ, ಗ್ರಾಮೀಣ ಭಾಗದ ಬಡಕುಟುಂಬಗಳಿಗೆ ಉದ್ಯೋಗ ನೀಡುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಎಂ.ಜಿ.ಎನ್.ಆರ್.ಇ.ಜಿ.ಎ. ಕ್ರಿಯಾ ಯೋಜನೆಗೆ ಅನುಮೋದನೆ ಸಿಕ್ಕಿಲ್ಲ ಎಂದು ಹಾಗೂ ಗ್ರಾ.ಪಂ ಮತ್ತು ತಾ.ಪಂ.ಗಳಿಂದ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ ಎಂಬ ನೆಪ ನೀಡಿ ಕಾಮಗಾರಿ ಅನುಷ್ಠಾನದಲ್ಲಿ ವಿಳಂಬ ಮಾಡುವುದು ಸರಿಯಲ್ಲ: ಕೂಲಿ ಕೆಲಸಕ್ಕೆ ಬೇಡಿಕೆ ಸಲ್ಲಿಸುವ ಅರ್ಹ ಪಲಾನುಭವಿಗಳಿಗೆ ಕೆಲಸ ನೀಡುವುದು ಗ್ರಾ.ಪಂ.ಗಳ ಆಧ್ಯ ಕರ್ತವ್ಯ; ಜಿಲ್ಲೆಗೆ 2014ನೇ ಆರ್ಥಿಕ ವರ್ಷಕ್ಕೆ ಮೊದಲ ಹಂತದಲ್ಲಿ ರೂ.138.81 ಕೋಟಿ ಹಾಗೂ ಮಾನ್ಯ ಮುಖ್ಯ ಮಂತ್ರಿಗಳ 15 ಅಂಶ ಕಾರ್ಯಕ್ರಮದಂತೆ, ರೂ.385.00 ಕೋಟಿ ಸೇರಿದಂತೆ ಒಟ್ಟು ರೂ.523.81 ಕೋಟಿ ಹಣವನ್ನು ಮೀಸಲಿರಿಸಲಾಗಿದೆ; ಇದುವರೆಗೂ ಜಿಲ್ಲೆಯಲ್ಲಿ 33 ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದ್ದು, ರೂ.109.00 ಕೋಟಿ ಹಣ ಖರ್ಚು ಮಾಡಲಾಗಿದೆ.

ಮುಂದುವರೆದು ಮಾತನಾಡಿ, ಮಾನ್ಯ ಮುಖ್ಯ ಮಂತ್ರಿಗಳ ಬಜೆಟ್ ಭಾಷಣದಲ್ಲಿ ಬೇರೆ ಬೇರೆ ಕಾಮಗಾರಿಗಳನ್ನು ಎನ್.ಆರ್.ಇ.ಜಿ.ಎ.ನಲ್ಲಿ ಸೇರ್ಪಡೆ ಮಾಡುವ ಸಂದರ್ಭದಲ್ಲಿ ಎಲ್ಲಾ ತಾಲ್ಲೂಕಿನ ಸ್ಯಾಟ್ಕಾಮ್ ಕೇಂದ್ರದ ಮುಖಾಂತರ ಎಲ್ಲಾ ಪಂಚಾಯತಿಗಳ ಜನಪ್ರತಿನಿಧಿಗಳನ್ನು ಒಳಗೊಂಡಂತೆ ತರಬೇತಿಯನ್ನು ನೀಡಲಾಗಿದೆ. ಕೊಟ್ಟಿಗೆ ನಿರ್ಮಾಣ, ಒಕ್ಕಣೆ ಕಣ, ನಮ್ಮ ಹೊಲ ನಮ್ಮ ರಸ್ತೆ; ಪ.ಜಾತಿ/ ಪ.ಪಂಗಡದವರಿಗೆ ಅವರ ಸ್ವಂತ ಜಮೀನಿನಲ್ಲಿ ಅಭವೃದ್ಧಿ ಕಾರ್ಯ, ಸ್ಮಶಾನಗಳ ಅಭಿವೃದ್ಧಿ ಸೇರಿದಂತೆ 15 ವಿವಿಧ ಕಾಮಗಾರಿಗಳು ಸೇರಿದ್ದು, ವೈಯಕ್ತಿಕ ಫಲಾನುಭವಿಗಳಿಗೆ ನಿರ್ಧಿಷ್ಟ ಗುರಿ ಇರುವುದಿಲ್ಲ; ಅದರಲ್ಲಿಯೂ ಒಕ್ಕಣೆ ಕಣ, ಕೊಟ್ಟಿಗೆ ಮನೆ ನಿರ್ಮಾಣಕ್ಕೆ ಎಲ್ಲಾ ಅರ್ಹ ಫಲಾನುಭವಿಗಳಿಗೂ ಅನುಮತಿ ನೀಡಬೇಕು; ಒಂದು ವೇಳೆ ಗ್ರಾ.ಪಂ.ಗಳು ತಪ್ಪು ಮಾಹಿತಿ ನೀಡಿದರೆ ಸೂಕ್ತ ಕ್ರಮಕೈಗೊಳ್ಳಲಾಗುವುದು; ಮತ್ತು ಒಂದು ಗ್ರಾಮ ಪಂಚಾಯತಿಯೂ ಇಷ್ಟೇ ಫಲಾನುಭವಿಗಳನ್ನು ಗುರುತಿಸಬೇಕು ಎಂಬ ನಿಯಮವಿಲ್ಲ; ಪಟ್ಟಿ ತಯಾರಿಸಿ ಗ್ರಾಮ ಸಭೆಯಲ್ಲಿ ಅನುಮೋದನೆ ಪಡೆದರೆ ಸಾಕು ಎಂದು ಸಭೆಗೆ ವಿವರಿಸಿದರು; ಹಾಗೂ ಈ ಬಗ್ಗೆ ಗ್ರಾಮ ಪಂಚಾಯತಿಗಳಲ್ಲಿ ಸಭೆ ಮಾಡಿ ಸುಮಾರು 385

ಕೋಟಿ ರೂ.ಗಳ ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ; ಕಾಮಗಾರಿಗಳು ಪ್ರಾರಂಭವಾಗಿರುತ್ತವೆ; ಗ್ರಾಮ ಸಭೆಗಳಲ್ಲಿ 70,000 ಕಾಮಗಾರಿಗಳು ಅನುಮೋದನೆಯಾಗಿದ್ದು, ಅನುಮೋದಿಸಿದ ಕಾಮಗಾರಿಗಳನ್ನು ತದನಂತರ ಜಿ.ಪಂ.ಗೆ ಬಾರದೆ ಇದ್ದರೂ ತಂತಾನಾಗಿಯೇ 15 ದಿನದಲ್ಲಿ ಕಾಮಗಾರಿ ಪ್ರಾರಂಭ ಮಾಡಬಹುದಾಗಿರುತ್ತದೆ. ಈ ವರೆಗೆ ಕೇವಲ ರೂ.109.00 ಕೋಟಿ ಖರ್ಚಾಗಿರುತ್ತದೆ; MGNREGA ನಲ್ಲಿ ಗುತ್ತಿಗೆ ಆಧಾರದಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲು ಅವಕಾಶವಿರುವುದಿಲ್ಲ ಒಂದು ವೇಳೆ ಈ ಬಗ್ಗೆ ದೂರುಗಳು ಕಂಡುಬಂದರೆ ಒಂಬುಂಡ್ಸಮನ್ ರ ಮೂಲಕ ಸಂಬಂಧಪಟ್ಟವರ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು; ಮಾರ್ಗಸೂಚಿ ಉಲ್ಲಂಘನೆ ಮಾಡಿದ್ದಲ್ಲಿ ಕಾಮಗಾರಿಯನ್ನು ಅಂದೇ ಸ್ಥಗಿತಗೊಳಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ್ ಬಾಬುರವರು ಮಾತನಾಡಿ, ರಾಜಕೀಯ ಮುಖಂಡರು ಹಾಗೂ ಪ್ರಭಾವಿಗಳು ಮಾತ್ರ ಗ್ರಾ.ಪಂ.ಗಳಲ್ಲಿ ಹೆಚ್ಚು ಸೌಲಭ್ಯ ಪಡೆಯುತ್ತಿದ್ದಾರೆ; ಗ್ರಾ.ಪಂ. ಅಧಿಕಾರಿಗಳನ್ನು ಕೇಳಿದರೆ ಈ ವರ್ಷ ಪಟ್ಟಿ ತಯಾರಿಸಿ ತಾ.ಪಂ.ಗಳಿಗೆ ಕಳುಹಿಸಲಾಗಿದೆ ಎಂಬ ಹಾರಿಕೆಯ ಉತ್ತರ ನೀಡುತ್ತಾರೆ; ಆದುದರಿಂದ ಗ್ರಾ.ಪಂ.ಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಡಾ:ರವಿ ರವರು ಮಾತನಾಡಿ, ವೈಯಕ್ತಿಕ ಕಾಮಗಾರಿಗಳಿಗೆ spill over ಗೆ ಅವಕಾಶವಿದೆಯೇ? ಎಂದು ಪ್ರಶ್ನಿಸಿದಾಗ ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು MGNREGA ಯೋಜನೆಯಡಿ ಒಮ್ಮೆ ಮಂಜೂರು ಆದ ಕಾಮಗಾರಿ ಮುಕ್ತಾಯವಾಗುವವರೆವಿಗೂ ಚಾಲ್ತಿಯಲ್ಲಿರುತ್ತದೆ ಎಂದು ತಿಳಿಸಿದರು. ಮುಂದುವರೆದು ಸದಸ್ಯರು ಮಾತನಾಡಿ, ಗ್ರಾ.ಪಂ.ಗಳ ಪಿ.ಡಿ.ಓ.ಗಳಿಗೆ ವೈಯಕ್ತಿಕ ಫಲಾನುಭವಿಗಳಿಗೆ ಯಾವುದೇ ಗುರಿ ಇರುವುದಿಲ್ಲ ಎಂದು ತಿಳಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಕೋರಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಯ್ಯನವರು ಮಾತನಾಡಿ, ಎಲ್ಲಾ ಗ್ರಾಮ ಪಂಚಾಯತಿಗಳಲ್ಲೂ ಈ ಗೊಂದಲ ಇದೆ ಎಂದು ತಿಳಿಸಿದಾಗ, ಡಾ: ರವಿ ರವರು ಜಿ.ಪಂ.ನಿಂದ ಈ ಬಗ್ಗೆ ಒಂದು ಸ್ಪಷ್ಟೀಕರಣ ಹೊರಡಿಸಬೇಕೆಂದು ತಿಳಿಸಿದರು.

**(ಕ್ರಮ: ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತ್, ತುಮಕೂರು.**

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, 15 ದಿವಸದೊಳಗೆ ಕಾಮಗಾರಿ ಅನುಷ್ಠಾನ ಮಾಡಬೇಕು ಎಂಬ ಬಗ್ಗೆ ಒಂದು ಆದೇಶ ನೀಡಬೇಕು ಎಂದು ತಿಳಿಸಿದರು; ಕಳೆದ ಕೆ.ಡಿ.ಪಿ.ಸಭೆಯಲ್ಲಿ, ಕೆಲಸ ಮಾಡಿಸದೆ ಜಿ.ಪಂ. ಸದಸ್ಯರು ಹಣ ಕೇಳುತ್ತಿದ್ದಾರೆ ಎಂಬ ಬಗ್ಗೆ ಮಾಧ್ಯಮದಲ್ಲಿ ವರದಿಯಾಗಿರುತ್ತದೆ; ಈ ಬಗ್ಗೆ ಸ್ಪಷ್ಟೀಕರಣ ಬೇಕು ಎಂದು ಆಗ್ರಹಿಸಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಕೆಲವು ಗ್ರಾ.ಪಂ. ಗಳಲ್ಲಿ ಉದ್ಯೋಗ ಚೀಟಿಗಳನ್ನು ಶೇಖರಣೆ ಮಾಡಿಕೊಂಡು ಅರ್ಹರಿಗೆ ಕೆಲಸ ನೀಡಿದರೆ ಈ ಸಮಸ್ಯೆ ಉದ್ಭವಿಸುವುದಿಲ್ಲ. ಎಲ್ಲಾ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಜನಗಳನ್ನು ಒಗ್ಗೂಡಿಸಿಕೊಂಡು ಕೆಲಸ ಮಾಡಬೇಕು. ಕ್ರಿಯಾ ಯೋಜನೆಯಲ್ಲಿರುವ ಅರ್ಹ ಕೂಲಿಗಾರರಿಗೆ ಕೆಲಸ ನೀಡುವುದಿಲ್ಲವೇ, ಒಟ್ಟಾರೆ ಅರ್ಹ ಕೂಲಿಗಾರರಿಗೆ ಕೆಲಸ ನೀಡುವುದು ನಮ್ಮೆಲ್ಲರ ಉದ್ದೇಶವಾಗಬೇಕು ಎಂದು ತಿಳಿಸಿದಾಗ,

ಮು.ಕಾ.ನಿ.ಅ.ರವರು ಈ ಯೋಜನೆಯಡಿ ಗುತ್ತಿಗೆ ನೀಡುವುದಾಗಲೀ, ಯಂತ್ರಗಳನ್ನು ಬಳಸುವುದಾಗಲೀ ಮಾಡಬಾರದು, ಇದರಿಂದ ಅರ್ಹರಿಗೆ ಅನ್ಯಾಯವಾಗುತ್ತದೆ, ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕು ಹಾಗೂ ಕೂಲಿಕಾರ್ಮಿಕರು ತಮ್ಮಲ್ಲೇನಾದರೂ ಲಭ್ಯವಿದ್ದಲ್ಲಿ ಅವರನ್ನು ಕರೆಸಿದರೆ ಅವರಿಗೆ ಕೂಲಿ ವ್ಯವಸ್ಥೆ ಮಾಡಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಡಾ: ರವಿರವರು ಮಾತನಾಡಿ, ಕೇಂದ್ರ ಸರ್ಕಾರ ರೂ.40 ಸಾವಿರ ಕೋಟಿ ರೂ.ಗಳ ಹಣ ನೀಡಿರುತ್ತದೆ. ಈ ಬಗ್ಗೆ ಗ್ರಾಮ ಪಂಚಾಯತಿಗಳಿಗೆ ಒಂದು ಸುತ್ತೋಲೆ ಹೊರಡಿಸುವ ವ್ಯವಸ್ಥೆ ಆಗಬೇಕು. ಈ ಯೋಜನೆಯಡಿ ತಾಂತ್ರಿಕ ಮಂಜೂರಾತಿ ನೀಡಿದ ಕೂಡಲೆ ಆಡಳಿತಾತ್ಮಕವಾಗಿ ಅನುಮೋದನೆ ನೀಡಬೇಕು; ಕಾಮಗಾರಿಗಳ ಬಿಲ್ಲನ್ನು ಯಾರು ಬರೆಯುತ್ತಾರೆ? ಪಂ.ರಾ.ಇಂಜಿನಿಯರುಗಳು ಬರೆಯುತ್ತಾರೋ ಅಥವಾ Out sources ರವರು ಮಾಡುತ್ತಾರೋ ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಸಭೆಯಲ್ಲಿ ಆಗ್ರಹಿಸಿದರು.

ಪ್ರತಿಯಾಗಿ ಮು.ಕಾ.ನಿ.ಅ.ರವರು ಮಾತನಾಡಿ 4-5 ಗ್ರಾಮ ಪಂಚಾಯತಿಗಳಿಗೆ ಒಬ್ಬ ಸೆಕ್ಷನ್ ಆಫೀಸರ್ ಇರುತ್ತಾರೆ, ನರೇಗಾ ಯೋಜನೆ ಅನುಷ್ಠಾನ ಸಂಪೂರ್ಣ ಜವಾಬ್ದಾರಿ ಅವರದೇ ಆಗಿರುತ್ತದೆ. ಅವರಿಗೂ ಸಹ ಕಾಮಗಾರಿಗಳ ಅಂದಾಜು ಪಟ್ಟಿ ತಯಾರಿಸುವಲ್ಲಿ ವಿಳಂಬವಾಗಬಾರದೆಂಬ ದೃಷ್ಟಿಯಿಂದ ಮಾಡೆಲ್ ಎಸ್ಟಿಮೇಟ್ ಗಳನ್ನು ನೀಡಲಾಗಿದೆ ಅದಕ್ಕೆ ಸಹಿ ಮಾಡಿ ಅಳತೆ ಪುಸ್ತಕದಲ್ಲಿ ಏನಾದರೂ ದಾಖಲು ಮಾಡುವ ಸಂಧರ್ಬದಲ್ಲಿ ವ್ಯತ್ಯಾಸ ಇದ್ದಲ್ಲಿ ಅವರೇ ಜವಾಬ್ದಾರರು, ಹಾಗೂ ಸಂಬಂಧಪಟ್ಟ ಶಾಖಾಧಿಕಾರಿಗಳು ನೇರ ಜವಾಬ್ದಾರರಾಗುತ್ತಾರೆ; MGNREGA ಯೋಜನೆ ಅಡಿ ಯಾವುದೇ ಕಾಮಗಾರಿಗಳು spill over ಆದರೆ ಅದಕ್ಕೆ ಅನುಮೋದನೆ ಬೇಕಾಗುವುದಿಲ್ಲ; ಕಾರ್ಯಪಾಲಕ ಇಂಜಿನಿಯರ್ ರವರು ಬಿಲ್ ಪಾವತಿಸಬೇಕು ಎಂದು ಸಭೆಗೆ ತಿಳಿಸಿದರು. ಹಾಗೂ ರೂ.10.00 ಲಕ್ಷವರೆಗಿನ ಕಾಮಗಾರಿಗಳ ತಾಂತ್ರಿಕ ಅನುಮೋದನೆಯನ್ನು ಸ.ಕಾ.ಇಂ. ರವರಿಗೆ ಅಧಿಕಾರವಿರುತ್ತದೆ. ರೂ.25.00 ಲಕ್ಷ ಮೇಲ್ಪಟ್ಟ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಅನುಮೋದನೆಯನ್ನು ಕಾರ್ಯಪಾಲಕ ಇಂಜಿನಿಯರ್ ರವರಿಗೆ ನೀಡಲಾಗಿರುತ್ತದೆ ಎಂದು ತಿಳಿಸಿದರು. ಸಣ್ಣ ಅತಿ ಸಣ್ಣ ರೈತರ ಪಟ್ಟಿಯನ್ನು ರೈತ ಸಂಪರ್ಕ ಕೇಂದ್ರದಿಂದ ಪಡೆದು ಅದರಂತೆ, ಕ್ರಮವಹಿಸಬಹುದೆಂದು ಮು.ಕಾ.ನಿ.ಅ ರವರು ಸೂಚಿಸಿದರು. ಯಾವುದೇ ಕಾರಣಕ್ಕೂ ಗುತ್ತಿಗೆದಾರರಿಗೆ, ಯಂತ್ರಗಳಿಗೆ ಈ ಯೋಜನೆಯಲ್ಲಿ ಅವಕಾಶವಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀಮತಿ ರಾಧ ದೇವರಾಜುರವರು ಮಾತನಾಡಿ, ಕಳೆದ ಹಲವು ದಿನಗಳಿಂದ ನಗರದ ಹಿರೇಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ರೋಮನ್ಸ್ ಕಂಪನಿ ಕಾರ್ಮಿಕರು ಮುಷ್ಕರ ನಡೆಸುತ್ತಿರುವ ಬಗ್ಗೆ ಗಮನ ಸೆಳೆದು ಅಲ್ಲಿ ಕಾರ್ಯನಿರ್ವಹಿಸುತ್ತಿರುವ 12 ಜನ ಕಾರ್ಮಿಕರಿಗೆ ಯಾವ ನೋಟೀಸ್ ನೀಡದೆ ಕೆಲಸದಿಂದ ತೆಗೆದುಹಾಕಿದ್ದಾರೆ; 3 -4 ದಿವಸದಿಂದ ಕಾರ್ಮಿಕರು ಉಪವಾಸ ಸತ್ಯಾಗ್ರಹ ಮಾಡಿದ ಹಿನ್ನೆಲೆಯಲ್ಲಿ, ಅವರು ಜಿಲ್ಲಾ ಆಸ್ಪತ್ರೆಗೆ ಸೇರಿರುತ್ತಾರೆ; ಅವರಿಗೆ ಯಾರೂ ಸಹ ನ್ಯಾಯ ನೀಡಿರುವುದಿಲ್ಲವೆಂದು ಸಭೆಯ ಗಮನ ಸೆಳೆದರು. ಮುಂದುವರೆದು ಸದಸ್ಯರು, ಕಾರ್ಮಿಕರ ಮೂಲ ಸಮಸ್ಯೆ ಏನು ಅವರು ಮುಷ್ಕರ ನಡೆಸುತ್ತಿರುವ ಸಂದರ್ಭದಲ್ಲಿಯೇ ಕಾರ್ಖಾನೆಯ ಆಡಳಿತ ಮಂಡಳಿ ಬೇರೆ ಕಾರ್ಮಿಕರನ್ನು ಕರೆಸಿಕೊಂಡು ಕೆಲಸ ಮಾಡಿಸುತ್ತಿದೆ, ಈ ಬಗ್ಗೆ ಸಂಬಂಧಪಟ್ಟ ಕಾರ್ಮಿಕ

ಇಲಾಖಾ ಅಧಿಕಾರಿಗಳು ಏನು ಕ್ರಮ ಕೈಗೊಂಡಿದ್ದಾರೆ; ಒಂದುವೇಳೆ ಸೂಕ್ತ ಕ್ರಮ ಕೈಗೊಂಡು ಕಾರ್ಮಿಕರಿಗೆ ನ್ಯಾಯ ಒದಗಿಸದಿದ್ದರೆ ಬೀದಿಗಿಳಿದು ಹೋರಾಟ ಮಾಡುವುದಾಗಿ ಸದಸ್ಯರು ತಿಳಿಸಿದಾಗ, ಈ ಮಾತಿಗೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಮಾತನಾಡಿ, ಈ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಲಾಗಿದೆ, 100 ಕ್ಕೂ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಿಗೆ ಯಾವುದೇ ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಇರುವುದಿಲ್ಲ; ಆದುದರಿಂದ ಪರಿಶೀಲನೆ ನಡೆಸಿ ವರದಿಯನ್ನು ಉನ್ನತ ಅಧಿಕಾರಿಗಳಿಗೆ ಸಲ್ಲಿಸಲಾಗಿದೆ, 1-2 ದಿನದಲ್ಲಿ ನಿರ್ದೇಶನ ಬರುವ ಸಾಧ್ಯತೆ ಇದ್ದು ಮುಂದಿನ ಕ್ರಮ ಕೈಗೊಳ್ಳುತ್ತೇವೆ; ಭೇಟಿಯ ವೇಳೆ ಆಡಳಿತ ಮಂಡಳಿ ಬೇರೆ ಕಾರ್ಮಿಕರು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದು, ಆದರೆ ಕಾರ್ಖಾನೆ ಒಳಗೆ ಭೇಟಿ ನೀಡಿದ ಸಂದರ್ಭದಲ್ಲಿ ಒಂದು ಕಡೆ 7-8 ಜನ ಕಾರ್ಮಿಕರನ್ನು ಅಕ್ರಮವಾಗಿ ಕೂಡಿಹಾಕಿ ನಮಗೆ ತಪ್ಪು ಮಾಹಿತಿ ನೀಡಿರುವ ಅಂಶ ಬೆಳಕಿಗೆ ಬಂದಿದೆ; ಕಾರ್ಮಿಕರ ಬೇಡಿಕೆಗಳು ಸೇರಿದಂತೆ ಸಮಗ್ರವಾದ ಮಾಹಿತಿಯನ್ನು ಉನ್ನತ ಅಧಿಕಾರಿಗಳಿಗೆ ಕಳುಹಿಸಿದ್ದು, ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ, ಮೇಲಾಧಿಕಾರಿಗಳು ನಿರ್ದೇಶನ ನೀಡಿದ ನಂತರ ಸೂಕ್ತಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ವಿವರಿಸಿದರು.

**ಕಾರ್ಮಿಕರ ಧರಣಿಯನ್ನು ಬೆಂಬಲಿಸಿ ಆದಷ್ಟು ಶೀಘ್ರವಾಗಿ ಅವರಿಗೆ ನ್ಯಾಯ ಒದಗಿಸಿಕೊಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ತೀರ್ಮಾನಿಸಿತು.**

**(ಕ್ರಮ: ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ, ತುಮಕೂರು)**

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿ ರವರು ಮಾತನಾಡಿ, ಜಿಲ್ಲೆಯಲ್ಲಿ ಕಾಲುಬಾಯಿ ಜ್ವರದಿಂದ ಸಾವನ್ನಪ್ಪಿದ ರಾಸುಗಳ ವಿವರ, ರಾಸುಗಳ ಫಲಾನುಭವಿಗಳಿಗೆ ನೀಡಲಾಗಿರುವ ಪರಿಹಾರ, ಹಾಗೂ ಸೂಕ್ತ ಚಿಕಿತ್ಸೆಯ ವಿವರ ನೀಡಬೇಕೆಂದು ಸಭೆಯ ಗಮನಕ್ಕೆ ತಂದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಉಪ ನಿರ್ದೇಶಕರು, ಪಶುಪಾಲನೆ ಇಲಾಖೆ ರವರಿಗೆ ಸಭೆಗೆ ಮಾಹಿತಿ ಒದಗಿಸಲು ತಿಳಿಸಿದಾಗ ಉಪ ನಿರ್ದೇಶಕರು ಮಾತನಾಡಿ, ಪ್ರಸ್ತುತ ಜಿಲ್ಲೆಯಲ್ಲಿ ಕಾಲುಬಾಯಿ ರೋಗ ನಿಯಂತ್ರಣವಾಗುತ್ತಿದೆ; ಜಿಲ್ಲೆಯಲ್ಲಿ ಒಟ್ಟು 7ಲಕ್ಷ ಜಾನುವಾರುಗಳಿದ್ದು, ಇವುಗಳಲ್ಲಿ 3322 ಜಾನುವಾರುಗಳು ಕಾಲುಬಾಯಿ ರೋಗ ಕಾಣಿಸಿಕೊಂಡಿದ್ದು, ಇದರಲ್ಲಿ 487 ಜಾನುವಾರುಗಳು ಸಾವನ್ನಪ್ಪಿವೆ. 385 ಜಾನುವಾರುಗಳ ಮಾಲೀಕರಿಗೆ ಪರಿಹಾರ ನೀಡಲು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಇದಕ್ಕೆ ಸುಮಾರು ರೂ.10.00ಲಕ್ಷ ಹಣದ ಅವಶ್ಯಕತೆಯಿದೆ; ರಾಸುಗಳ ಚಿಕಿತ್ಸೆಗಾಗಿ ಜಿ.ಪಂ. ನಿಂದ ರೂ.10.00 ಲಕ್ಷ ಹಾಗೂ ಜಿಲ್ಲಾಧಿಕಾರಿಗಳ ಪರಿಹಾರ ನಿಧಿಯಿಂದ ರೂ.20.00 ಲಕ್ಷ ನೀಡಲಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಸುಮಾರು ರೂ.10.00ಕೋಟಿ ಅನುದಾನ ನಿರೀಕ್ಷೆ ಮಾಡಲಾಗಿದೆ; ಹಾಗೆ ರಾಜ್ಯ ಸರ್ಕಾರ ದಿನಾಂಕ: 20-12-2014ರ ಒಳಗೆ ಸಾವನ್ನಪ್ಪಿದ ಜಾನುವಾರುಗಳಿಗೆ ಮಾತ್ರ ಪರಿಹಾರ ನೀಡಲು ಪಟ್ಟಿ ಸಿದ್ದಪಡಿಸುವಂತೆ ಸುತ್ತೋಲೆ ಕಳುಹಿಸಿದೆ. ಸರ್ಕಾರದ ಮುಂದಿನ ಆದೇಶಕ್ಕೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು; ಜಿಲ್ಲೆಯ 7ಲಕ್ಷ ಜಾನುವಾರುಗಳ ಪೈಕಿ 6.95ಲಕ್ಷ ಜಾನುವಾರುಗಳಿಗೆ ವ್ಯಾಕ್ಸಿನೇಷನ್ ಲಸಿಕೆ ಹಾಕಲಾಗಿದೆ. ಈ ವರ್ಷ ನಡೆಯಬೇಕಿದ್ದ ಜಾನುವಾರು ಜಾತ್ರೆಗಳನ್ನು ನಿಷೇಧಿಸಲು ಕ್ರಮ ಕೈಗೊಳ್ಳಲಾಗಿದೆ. ಕೊರಟಗೆರೆ ತಾ: ಕ್ಯಾಮೇನಹಳ್ಳಿ ಜಾನುವಾರು ಜಾತ್ರೆ ನಡೆಸದಂತೆ ಸಂಬಂಧಪಟ್ಟವರಿಗೆ ಮಾಹಿತಿ ರವಾನಿಸಲಾಗಿದೆ ಹಾಗೂ ಅಕ್ಕಿರಾಂಪುರ ಕುರಿ ಸಂತೆ ನಿಲ್ಲಿಸಿದೆ;

ದಿನಾಂಕ: 15-02-2014 ರಿಂದ 15-03-2014ರವರೆಗೆ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಪ್ರಚಾರ ಕ್ರಮ ಕೈಗೊಳ್ಳಬೇಕಿದೆ; ಕಾಲುಬಾಯಿ ಜ್ವರವನ್ನು ಒಂದೇ ವರ್ಷದಲ್ಲಿ ನಿಯಂತ್ರಿಸಲು ಸಾಧ್ಯವಿಲ್ಲ; ಕನಿಷ್ಟ 8-9 ವರ್ಷಗಳ ಕಾಲ ಲಸಿಕೆ ಹಾಕಬೇಕು; ಆದರೆ ಪಲ್ಸ್ ಪೋಲಿಯೋ ಮಾದರಿಯಲ್ಲಿ ಲಸಿಕೆ ಹಾಕಲು ಸಾಧ್ಯವಿಲ್ಲ; ಈ ವರ್ಷ ಲಸಿಕೆ ಹಾಕಿದ ಮಾದರಿಯಲ್ಲಿಯೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು. ಮುಂದುವರೆದು ಮಾತನಾಡಿ, ದಿನಾಂಕ: 20-12-2013ರ ನಂತರ ಕಾಲುಬಾಯಿ ರೋಗದಿಂದ ಸಾವನ್ನಪ್ಪಿದ ರಾಸುಗಳ ಮಾಲೀಕರಿಗೆ ಪರಿಹಾರ ಒದಗಿಸುವ ಸಂಬಂಧ ಸರ್ಕಾರ ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿ ರಚನೆ ಮಾಡಿ, ಸಮಿತಿ ಅನುಮೋದನೆ ಕೊಟ್ಟ ನಂತರ ರಾಸುಗಳ ಪಟ್ಟಿ ಮಾಡಿ ಬಿಲ್ ತಯಾರಿಸಿ ಮು.ಕಾ.ನಿ.ಅ.ರವರ ಮುಖಾಂತರ ಆಯುಕ್ತರಿಗೆ ಕಳುಹಿಸಿಕೊಡಲಾಗುವುದು. ಯಾವುದೇ ಪ್ರಾಣಿ ಸಾವನ್ನಪ್ಪಿದರೆ ಮರಣೋತ್ತರ ಪರೀಕ್ಷೆ ಮಾಡಿ ಮಾಹಿತಿ ಕಳುಹಿಸಿಕೊಡುವಂತೆ ತಿಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮ ಮಹಾಲಿಂಗಪ್ಪರವರು ಮಾತನಾಡಿ, ಶಿರಾ ತಾಲ್ಲೂಕಿನಲ್ಲಿ ಬಹಳ ಹಸುಗಳು ಈ ರೋಗದಿಂದ ಸಾವನ್ನಪ್ಪಿವೆ, ಸತ್ತ 12 ಹಸುಗಳ ಮಾಲೀಕರಿಗೆ ಈವರೆಗೆ ಪರಿಹಾರ ಸಿಕ್ಕಿರುವುದಿಲ್ಲ. ಆದುದರಿಂದ ಕೂಡಲೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಡಲು ತಿಳಿಸಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯರವರು ಮಾತನಾಡಿ ಸಿ.ಎನ್.ಹಳ್ಳಿ ತಾಲ್ಲೂಕಿನಲ್ಲಿ 10-12 ರಾಸುಗಳು ಕಾಲುಬಾಯಿ ರೋಗದಿಂದ ಸಾವನ್ನಪ್ಪಿವೆ ಹಾಗೂ ಈ ರೋಗ ರಾಸುಗಳಿಗೆ ಮತ್ತೆ ಆವರಿಸುತ್ತಿರುವುದು ಕಂಡು ಬರುತ್ತಿದೆ. ಆದುದರಿಂದ ಪಶು ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಔಷಧಿಗಳನ್ನು ಕೊಡಿಸಿಕೊಡಬೇಕೆಂದು ಸಭೆಯ ಗಮನಕ್ಕೆ ತಂದರು.

ಜಿ.ಪಂ.ನ ಮಾನ್ಯ ಸದಸ್ಯರುಗಳಾದ ಶ್ರೀ ಬಡೀರಣ್ಣ, ಶ್ರೀ ಸಿ.ಆರ್.ಉಮೇಶ್ ಮತ್ತು ಶ್ರೀ ವೈ.ಹೆಚ್.ಹುಚ್ಚಯ್ಯನವರು ತಾಲ್ಲೂಕುವಾರು ಕಾಲುಬಾಯಿ ರೋಗದಿಂದ ಸಾವನ್ನಪ್ಪಿದ ರಾಸುಗಳ ವಿವರವನ್ನು ಉಪ ನಿರ್ದೇಶಕರು ಪಶುಪಾಲನೆ ಇಲಾಖೆ ರವರಿಂದ ಪಡೆದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಜಿಲ್ಲೆಯು MGNREGA ಕಾಮಗಾರಿಗಳ ಪ್ರಗತಿಯಲ್ಲಿ ರಾಜ್ಯದಲ್ಲಿಯೇ 1ನೇ ಸ್ಥಾನಕ್ಕೆ ಬಂದಿರುವುದನ್ನು ಶ್ಲಾಘಿಸಿದರು. ಮುಂದುವರೆದು ಮಾತನಾಡಿ, ಮಧುಗಿರಿ ತಾಲ್ಲೂಕಿನಲ್ಲಿ ಬರ ತಾಂಡವವಾಡುತ್ತಿದೆ, ಚಿ.ನಾ.ಹಳ್ಳಿ, ತಿಪಟೂರು ಮತ್ತು ತುರುವೇಕೆರೆಗಳಲ್ಲಿ ತೆಂಗು ಅಡಿಕೆ ತೋಟಗಳಿಗೆ ರೋಗ ತಗುಲಿ ಫಸಲು ನಾಶವಾಗಿ ತೆಂಗು ಬೆಳೆಗಾರರು ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ, ಅವರಿಗೆ ಬೆಳೆ ಪರಿಹಾರವನ್ನು ಕೊಡಿಸಿಕೊಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಕುರಿತು ಅಧ್ಯಯನಕ್ಕಾಗಿ ಕೇಂದ್ರದಿಂದ ತಂಡವೊಂದು ಅಧ್ಯಯನ ಮಾಡಿ ಸುಮಾರು 10.00 ಕೋಟಿ ರೂ.ಗಳನ್ನು ಒಂದೊಂದು ತಾಲ್ಲೂಕಿಗೆ ಬಿಡುಗಡೆ ಮಾಡಿ, ಅದನ್ನು ರೈತರಿಗೆ ವಿತರಣೆ ಮಾಡಲು ಕ್ರಮವಹಿಸಲಾಗಿದೆ ಎಂದು ಹೇಳಿದರು; ಹಾಗೂ

ಬೆಳೆ ವಿಫಲ ಹೊಂದಿದ ರೈತರಿಗೆ ಉಚಿತವಾಗಿ ಗೊಬ್ಬರ ಮತ್ತು ತೆಂಗು ಬಿತ್ತನೆ ಬೀಜ ವಿತರಿಸಲು ಕ್ರಮ ವಹಿಸಲು ಸಹ ಹೇಳಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಸುಮಾರು 20-25 ಕೋಟಿ ರೂ.ಗಳಷ್ಟು ದೇವರಾಜ ಅರಸು ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಡಿ ವಿತರಣೆ ಆದ ಸಾಲ ಮನ್ನಾ ಮಾಡಿದ ಬಗ್ಗೆ ಸರ್ಕಾರ ಆದೇಶ ಹೊರಡಿಸಿದೆ; ಆದರೆ ನಿಗಮದಿಂದ ಸಾಲವೇ ಮಂಜೂರಾಗಿ ವಿತರಿಸದಿದ್ದರೂ ಮನ್ನಾದೇಶ ಬಂದಿದೆ. ನೀಡಿರುವ ಸಾಲ ಯೋಜನೆಯಲ್ಲಿ ಸಾಕಷ್ಟು ಅವ್ಯವಹಾರ ಕಂಡು ಬರುತ್ತಿರುವ ಹಿನ್ನೆಲೆಯಲ್ಲಿ ವಿಷಯವನ್ನು ಸಭೆಯ ಗಮನಕ್ಕೆ ತರಲಾಗಿ, ನಿಗಮಗಳಿಗೆ ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಿದ ಅರ್ಹ ಫಲಾನುಭವಿಗಳು ಸಾಲ ಪಡೆಯದೆ ಇದ್ದರೂ ಸಾಲ ಮನ್ನಾ ಮಾಡಿರುವ ತಿಳುವಳಿಕೆ ಪತ್ರ ತಲುಪಿದೆ. ಈ ಬಗ್ಗೆ ವಿಚಾರಣೆ ಮಾಡಲಾಗಿ ಫಲಾನುಭವಿಗಳು ಸಲ್ಲಿಸಿದ್ದ ಅರ್ಜಿಯನ್ನು ದುರುಪಯೋಗ ಮಾಡಿಕೊಂಡು ಅವರ ಹೆಸರಿನಲ್ಲಿ ಸಾಲ ಮಂಜೂರು ಮಾಡಿ ಬ್ಯಾಂಕ್ ಅಧಿಕಾರಿಗಳು, ನಿಗಮದ ಅಧಿಕಾರಿಗಳು ಹಾಗೂ ಮಧ್ಯವರ್ತಿಗಳು ಹಣ ಪಡೆದಿರುವ ಅಂಶ ಕಂಡು ಬರುತ್ತಿದೆ. ಆದುದರಿಂದ ಸದರಿ ನಿಗಮಗಳಿಂದ 2009-10 ರಿಂದ ಇದುವರೆವಿಗೂ ವಿತರಣೆಯಾಗಿರುವ ಸಾಲ, ಸಾಲ ಮನ್ನಾ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವಂತೆ ಒತ್ತಾಯಿಸಿದರು. ಮುಂದುವರೆದು ಶಿರಾ ತಾಲ್ಲೂಕು ಕ್ಯಾದಿಗುಂಟೆ ಗ್ರಾಮದ ಶ್ರೀ ತಿಮ್ಮಣ್ಣ ಎಂಬುವರ ಮಗಳಾದ ಶಾರದಮ್ಮ ರವರಿಗೆ 2009-10ನೇ ಸಾಲಿನಲ್ಲಿ ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದಿಂದ ಚೈತನ್ಯ ಸಬ್ಸಿಡಿ ಯೋಜನೆಯಡಿಯಲ್ಲಿ ಒಟ್ಟು 50000 ಸಾಲ ಮಂಜೂರಾಗಿದ್ದು, ಇದರಲ್ಲಿ 15000/- ಗಳ ಮ್ಯಾಚಿಂಗ್ ಗ್ರಾಂಟ್ ಅನ್ನು ನಿಗಮದ ವತಿಯಿಂದ ದಿನಾಂಕ:04-02-2010 ರಂದು ಬರಗೂರು ಕೆನರಾ ಬ್ಯಾಂಕ್ ಶಾಖೆಗೆ ಬಿಡುಗಡೆಯಾಗಿದ್ದು, ಅವರು 27-02-2010 ರಂದು ಹಣ ಡ್ರಾ ಮಾಡಿಕೊಂಡಿದ್ದಾರೆ, ಆದರೆ ಇದುವರೆಗೂ ಫಲಾನುಭವಿಗೆ ಹಣ ತಲುಪಿಲ್ಲ; ಫಲಾನುಭವಿ ಹಲವಾರು ಭಾರಿ ಭೇಟಿ ನೀಡಿ ವಿಚಾರಿಸಿದರು ಸಾಲ ಮಂಜೂರಾಗಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ ದಿನಾಂಕ: 3-07-2013 ರಲ್ಲಿ ನಿಗಮದಿಂದ ತಮ್ಮ ಸಾಲ ಮನ್ನಾ ಆಗಿರುವ ಬಗ್ಗೆ ತಿಳುವಳಿಕೆ ಪತ್ರ ಬಂದಾಗ ಗಾಬರಿಯಿಂದ ಫಲಾನುಭವಿ ಕುಟುಂಬವರ್ಗ ನಿಗಮದ ಅಧಿಕಾರಿಗಳನ್ನು ವಿಚಾರಿಸಿದಾಗ, ಬ್ಯಾಂಕ್ ಅಧಿಕಾರಿಗಳಿಂದ ಮೋಸ ಹೋಗಿರುವುದು ಕಂಡು ಬಂದಿದೆ; ಕಳೆದ 3 ವರ್ಷಗಳಿಂದಲೂ ಫಲಾನುಭವಿಗಳಿಗೆ ಹಣ ನೀಡದ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ಫಲಾನುಭವಿಗೆ ಸಾಲದ ಹಣದ ಜೊತೆಗೆ ಪರಿಹಾರ/ ಬಡ್ಡಿ ಕೊಡಿಸಬೇಕೆಂದು ಆಗ್ರಹಿಸಿದರು. ಹಾಗೂ ಇದೇ ತಾಲ್ಲೂಕಿನ ಲಕ್ಷ್ಮೀಸಾಗರ ಗ್ರಾಮದ ಶ್ರೀ ಮಹದೇವಪ್ಪ ಎಂಬುವರು ಶ್ರಮಶಕ್ತಿ ಯೋಜನೆಯಡಿ ಸಾಲಕ್ಕೆ ಅರ್ಜಿ ಸಲ್ಲಿಸಿದ್ದು, 2009-10ನೇ ವರ್ಷದ ಸಾಲಿನಲ್ಲಿ ಸಾಲ ಮಂಜೂರು ಆದರೂ ಈವರೆಗೂ ಫಲಾನುಭವಿಗೆ ತಲುಪಿಲ್ಲ; ಆದರೆ ನಿಗಮದಿಂದ ಸಾಲ ಮನ್ನಾ ಆಗಿರುವ ತಿಳುವಳಿಕೆ ಪತ್ರ ನೀಡಲಾಗಿದೆ. ಕೆಲವು ಸ್ತ್ರೀಶಕ್ತಿ ಸಂಘಗಳ ವೈಯಕ್ತಿಕ ಫಲಾನುಭವಿಗಳಿಗೆ ಇದೇ ರೀತಿ ಸಾಲದ ಹಣ ದುರುಪಯೋಗವಾಗಿರುವುದು ಕಂಡುಬಂದಿರುವುದರಿಂದ ಅವರ ವಿರುದ್ಧವೂ ಸಹ ಶಿಸ್ತುಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯರವರು ಮಾತನಾಡಿ, ಹಿಂದೆ ಇದ್ದ ನಿಗಮದ ಅಧಿಕಾರಿ (ಶ್ರೀ.ರಂಗಸ್ವಾಮಿ) ಸಾಲ ಮಂಜೂರಾತಿಯಲ್ಲಿ ಬಹಳಷ್ಟು ಅವ್ಯವಹಾರ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಇಂತಹವರನ್ನು ಜನಪ್ರತಿನಿಧಿಗಳು ನಂಬುವುದಾದರೂ ಹೇಗೆ? ಅಂತಹ ಭ್ರಷ್ಟ ಅಧಿಕಾರಿಯನ್ನು ಲೋಕಾಯುಕ್ತ ವಿಚಾರಣೆಗೆ ಒಳಪಡಿಸಿ ಅಥವಾ

ತಮ್ಮ ಹಂತದಲ್ಲಿಯೇ ಕೂಡಲೇ ತಕ್ಕಶಿಸ್ತು ಕ್ರಮ ಜರುಗಿಸಲು ಮು.ಕಾ.ನಿ.ಅ. ರವರಲ್ಲಿ ಕೋರಿದರು. ಹಾಗೂ ಆ ಅಧಿಕಾರಿಯ ಅವಧಿಯಲ್ಲಿ ಇಂತಹ ಪ್ರಕರಣಗಳನ್ನು ಕಂಡುಹಿಡಿಯಲೇಬೇಕು ಎಂದು ಸಭೆಯಲ್ಲಿ ಒತ್ತಾಯಿಸಿದರು.

ಜಿ.ಪಂ.ಮಾನ್ಯ ಸದಸ್ಯರುಗಳಾದ ಶ್ರೀ ಉಗ್ರಯ್ಯ, ಶ್ರೀ ಬಿ.ಕೆ.ಬಡೀರಣ್ಣ, ಸಿ.ಆರ್.ರಾಮಚಂದ್ರಪ್ಪ ಹಾಗೂ ಬಹುತೇಕ ಸದಸ್ಯರು ಮಾನ್ಯ ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯವರ ಮಾತಿಗೆ ಬೆಂಬಲಿಸುತ್ತಾ, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬಂದಿರುವ ದೂರುಗಳನ್ನು ಸಭೆಯ ಗಮನಕ್ಕೆ ತಂದಾಗ ಪ್ರಕರಣಗಳನ್ನು ಲೋಕಾಯುಕ್ತ ತನಿಖೆಗೆ ವಹಿಸಬೇಕೆಂದು ಒಮ್ಮತದಿಂದ ಆಗ್ರಹಿಸಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಸಭೆಗೆ ಬಂದ ವಂಚಿತ ಫಲಾನುಬವಿಗಳಾದ ಶ್ರೀಮತಿ ಶಾರದಮ್ಮ ಮತ್ತು ಶ್ರೀ ಮಹದೇವಪ್ಪ ಅವರುಗಳು ತಮ್ಮಗಳಿಗೆ ಆದ ಅನ್ಯಾಯವನ್ನು ವಿವರವಾಗಿ ಸಭೆಗೆ ವಿವರಿಸಿದರು.

ಮು.ಕಾ.ನಿ.ಅಧಿಕಾರಿಯವರು ಮಾತನಾಡಿ, ಸದಸ್ಯರ ಅಹವಾಲುಗಳಿಗೆ ಸ್ಪಂಧಿಸಿ ಸರ್ಕಾರ ಬಡವರ ಅಭಿವೃದ್ಧಿಗೆಂದು ಬಿಡುಗಡೆ ಮಾಡಿದ ಸವಲತ್ತುಗಳನ್ನು ದುರುಪಯೋಗ ಪಡಿಸಿಕೊಂಡಿರುವುದು ನಾಚಿಕೆಗೇಡಿನ ಕೆಲಸ, ತಲೆತಗ್ಗಿಸುವಂತಹ ವಿಚಾರ, ಈ ಬ್ರಷ್ಟಾಚಾರವನ್ನು ಸಹಿಸಲು ಸಾಧ್ಯವಿಲ್ಲ. ಆದ್ದರಿಂದ ಇಲಾಖಾ ತನಿಖೆಗೆ ಆದೇಶಿಸಲಾಗುವುದು ಹಾಗೂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರ ನೇತೃತ್ವದಲ್ಲಿ ಇನ್ನೊಂದು ವಾರದೊಳಗೆ ತನಿಖೆ ನಡೆಸುವುದಲ್ಲದೆ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ಪ್ರಕರಣವನ್ನು ಗಮನಕ್ಕೆ ತರಲಾಗುವುದು, ಫಲಾನುಭವಿಗಳಿಗೆ ಹಣ ನೀಡದ ಬ್ಯಾಂಕ್ ಅಧಿಕಾರಿಗಳ ವಿರುದ್ಧ ನಬಾರ್ಡ್ ಮತ್ತು ಆರ್.ಬಿ.ಐ. ಅಧಿಕಾರಿಗಳು, ಕೆನರಾ ಬ್ಯಾಂಕಿನ ಹಿರಿಯ ಅಧಿಕಾರಿಗಳಿಗೆ ಕ್ರಮಕ್ಕೆ ಪತ್ರಿಸುವುದಾಗಿ ಸಭೆಗೆ ತಿಳಿಸಿದರು.

**(ಕ್ರಮ: ಉಪ ಕಾರ್ಯದರ್ಶಿ (ಆಡಳಿತ), ಜಿ.ಪಂ.ತುಮಕೂರು)**

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ. ಉಗ್ರಯ್ಯನವರು ಮಾತನಾಡಿ, ನಿಗಮಗಳ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದಿರುವ ಕೊಳವೆ ಬಾವಿಗಳಿಗೆ ಈವರೆವಿಗೂ ಪಂಪು ಮೋಟಾರ್ ಅಳವಡಿಸಿರುವುದಿಲ್ಲ. ಇಲ್ಲಿಯೂ ಸಹ ಬಹಳಷ್ಟು ಅವ್ಯವಹಾರ ನಡೆಯುತ್ತಿದೆ; ರೈತರಿಗೆ ಮೋಸ ಮಾಡಿ ಕೊಳವೆಬಾವಿ ಕೊರೆಯಲು ಅವರಿಂದ ಹಣ ವಸೂಲು ಮಾಡುತ್ತಿರುವ ದೂರುಗಳು ಕಂಡು ಬಂದಿವೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ತನಿಖೆಗೆ ಒಳಪಡಿಸಲು ಆಗ್ರಹಿಸಿದರು.

**(ಕ್ರಮ: ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿ.ಪಂ.ತುಮಕೂರು.)**

ಮಾನ್ಯ ಸದಸ್ಯರಾದ ಶ್ರೀಮತಿ ಲಲಿತಾ ನಿಂಗಪ್ಪನವರು ಮಾತನಾಡಿ, ಅವರ ಕ್ಷೇತ್ರ ವ್ಯಾಪ್ತಿಯ ಅನಕ್ಷರಸ್ಥ ವಿಧವೆಯೊಬ್ಬರು ಉದ್ಯೋಗಿನಿ ಯೋಜನೆಯಡಿ ಹೆಬ್ಬೂರು I.O.B.ಶಾಖೆಯಲ್ಲಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದು, ಈವರೆಗೂ ಅವರಿಗೆ ಚೆಕ್ ನೀಡಿರುವುದಿಲ್ಲ; ಕೂಡಲೇ ಸದರಿಯವರಿಗೆ ಚೆಕ್ ಕೊಡಿಸಿಕೊಡಬೇಕೆಂದು ಸಭೆಯಲ್ಲಿ ಕೋರಿದರು.

ಮುಖ್ಯ ಕಾರ್ಯಾನಿರ್ವಾಹಕ ಅಧಿಕಾರಿಯವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮವಹಿಸಲು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು ರವರಿಗೆ ಸೂಚಿಸಿದರು.

**(ಕ್ರಮ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು)**

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಕುಣಿಗಲ್ ತಾಲ್ಲೂಕು ಪಂಚಾಯತಿಯ ಎಸ್.ಜಿ.ಎಸ್.ವೈ. ಯೋಜನೆಯಡಿ 2009-10, 2010-11 ಮತ್ತು 2011-12ನೇ ಸಾಲಿನಲ್ಲಿ ನಡೆದಿರುವ ಅವ್ಯವಹಾರಗಳನ್ನು ಕುರಿತು ಸಭೆಯ ಗಮನಕ್ಕೆ ತಂದರು.

- ಎಸ್.ಜಿ.ಎಸ್.ವೈ. ಯೋಜನೆಯಡಿ 2009-10, 2010-11 ಮತ್ತು 2011-12ನೇ ಸಾಲಿನ ವೆಚ್ಚ ರೂ.1,07,57,240/-ಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ಸಲ್ಲಿಸದಿರುವುದು.
- ಎಸ್.ಜಿ.ಎಸ್.ವೈ. ಯೋಜನೆಯ ಮಾರ್ಚ್ 2012ನೇ ಸಾಲಿನ ಮತ್ತು 2011-12ನೇ ಸಾಲಿನ ವೆಚ್ಚಕ್ಕೆ ಸಂಬಂಧಿಸಿದ ರೂ.10,45,000/- ಗಳಿಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳನ್ನು ಪಡೆಯದಿರುವುದು.
- 2010-11ನೇ ಸಾಲಿನಲ್ಲಿ 42 ಸಂಘಗಳಿಗೆ ಒಂದೆ ದಿನ ಒಂದೇ ಚೆಕ್ಕಿನಲ್ಲಿ ರೂ.30,75,000/-ಗಳ ಹಣ ಪಾವತಿಸಿರುವುದು.
- 2010-11ನೇ ಸಾಲಿನಲ್ಲಿ 17 ಸಂಘಗಳಿಗೆ ಒಂದೇ ಬಾರಿಗೆ ಒಂದೇ ಚೆಕ್ಕಿನಲ್ಲಿ ರೂ.10,65,000/-ಗಳ ಹಣ ಪಾವತಿಸಿರುವುದು.
- ದಿನಾಂಕ:31-03-2012ಕ್ಕೆ ಯೋಜನೆಯ ರೂ.1,03,58,246/- ಹಣವನ್ನು ವೆಚ್ಚ ಮಾಡಿರುವುದು.
- ಸ್ವಸಹಾಯ ಸಂಘಗಳಿಗೆ ರೂ.1,07,37,500/-ಸಹಾಯಧನ ಪಾವತಿಸಿದ್ದು ಆಸ್ತಿ ಸೃಷ್ಟಿಯಾಗಿರುವ ಬಗ್ಗೆ ವಿವರ ಸಲ್ಲಿಸದಿರುವುದು.
- 2011-12ನೇ ಸಾಲಿನಲ್ಲಿ ಪಾವತಿಸಿರುವ ರೂ.16,90,000/-ಗಳ ಹಣಕ್ಕೆ ಬ್ಯಾಂಕುಗಳಿಂದ ಹಣ ಬಳಕೆ ಪತ್ರ ಪಡೆಯದಿರುವುದು.

ದಿನಾಂಕ:28-07-2012ರ ಆಡಿಟ್ ವರದಿ ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿಯವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ನೀಡಿರುವ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸುವುದು; ಪ್ರತಿ ಮಾಹೆ Treasury Amountಗೆ ತಾಳೆ ಮಾಡಿಕೊಂಡು reconciliation ಮಾಡಿಕೊಂಡಿರುವ ಬಗ್ಗೆ ವಿವರ ಪಡೆಯುವಂತೆ ತಿಳಿಸಿದರು.

ಈ ಮೇಲಿನ ಎಲ್ಲಾ ಆರ್ಥಿಕ ನ್ಯೂನತೆಗಳ ಕುರಿತು ಕೈಗೊಂಡಿರುವ ಬಗ್ಗೆ ಯೋಜನಾ ನಿರ್ದೇಶಕರು ಮಾಹಿತಿ ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕುಣಿಗಲ್ ತಾಲ್ಲೂಕು ಪಂಚಾಯತಿಯ ಎಸ್.ಜಿ.ಎಸ್.ವೈ. ಯೋಜನೆಯಡಿ 2009-10, 2010-11 ಮತ್ತು 2011-12ನೇ ಸಾಲಿನಲ್ಲಿ ಅವ್ಯವಹಾರಗಳ ತನಿಖೆ ಮಾಡುವಂತೆ ಕಳೆದ 8 ತಿಂಗಳ ಹಿಂದೆ ಒಬ್ಬರು ಲೋಕಾಯುಕ್ತಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಜಿ.ಪಂ.ವತಿಯಿಂದಲೂ ಸಹ ಸದರಿ ತಾಲ್ಲೂಕು ಪಂಚಾಯತಿಗೆ ಲೆಕ್ಕ ತನಿಖಾ ತಂಡವು ಹೋಗಿ ಲೆಕ್ಕ ತನಿಖೆಯನ್ನು ಮಾಡಿ ವರದಿ ನೀಡಿರುತ್ತಾರೆ; ವರದಿಯಲ್ಲಿ ತನಿಖಾ ವೇಳೆಯಲ್ಲಿ ಸಂಬಂಧಪಟ್ಟ ದಾಖಲಾತಿಗಳನ್ನು ಒದಗಿಸಿರುವುದಿಲ್ಲ; ಈ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿದ್ದು ಮೇಲ್ನೋಟಕ್ಕೆ ಸ್ವಸಹಾಯ ಸಂಘಗಳಿಗೆ ಸಹಾಯಧನ ನೀಡಿರುವ ಕ್ರಮದ ಬಗ್ಗೆ ಸಂಬಂಧ ಅಧಿಕಾರಿ/ನೌಕರರ ಮೇಲೆ ಸೂಕ್ತ ಕ್ರಮವಹಿಸಲಾಗಿದೆ; ಸಂಬಂಧಪಟ್ಟ Class-I ಅಧಿಕಾರಿಗಳಿಗೆ ಷೋಕಾಸ್ ನೋಟೀಸ್ ಕೊಟ್ಟು ಅವರಿಂದ ವಿವರಣೆ ಪಡೆಯಲಾಗಿದೆ; 1

ರಿಂದ 4 ದೋಷಾರೋಪಣೆ ಪಟ್ಟಿ ನೀಡಲಾಗಿದೆ; ಇಲಾಖಾ ವಿಚಾರಣೆ ಮಾಡಲು ಸರ್ಕಾರಕ್ಕೆ ಸಂಬಂಧಪಟ್ಟ ಇಲಾಖೆಯವರಿಗೆ ಪತ್ರಿಸಲಾಗಿದೆ; ಹಣ ದುರುಪಯೋಗ ಮಾಡಿರುವ ಅಧಿಕಾರಿಗೆ ರಕ್ಷಣೆ ಕೊಡುವುದಿಲ್ಲ; ನಿಯಮಾನುಸಾರ ಶಿಸ್ತು ಕ್ರಮಗಳನ್ನು ಈ ಕಛೇರಿಯಿಂದ ನಿರ್ವಹಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮ ಮಹಾಲಿಂಗಪ್ಪ ರವರು ಮಾತನಾಡಿ, ರಾಜೀವ್ ಗಾಂಧಿ ವಸತಿ ನಿಗಮದಿಂದ ಜಿಲ್ಲೆಗೆ ಮಂಜೂರಾಗಿರುವ ಮನೆಗಳ ವಿವರ ನೀಡುವಂತೆ ಸಭೆಯಲ್ಲಿ ಕೋರಿದರು.

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ತುಮಕೂರು ಜಿಲ್ಲೆಗೆ 2013-14 ರಲ್ಲಿ ಮಂಜೂರಾದ ಮನೆಗಳ ಬಗ್ಗೆ ಕೆಳಲಾದ ವಿವರ ಈ ಕೆಳಕಂಡಂತೆ ವಿವರಿಸಲಾಗಿದೆ.

| ಕ್ರ. ಸಂ | ತಾಲ್ಲೂಕು | ತಾಲ್ಲೂಕಿನ ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ | 2013-14 ರಲ್ಲಿ ನಿಗಧಿ ಪಡಿಸಿರುವ ಗುರಿ ಮತ್ತು ಆಯ್ಕೆಗಳ ವಿವರ | | | | |
|---|---|---|---|---|---|---|---|
| | | | ಬಸವ ವಸತಿ ಗುರಿ | ಆಯ್ಕೆ | ಇಂದಿರಾ ಆವಾಜ್ ಗುರಿ | ಆಯ್ಕೆ | ಷರಾ |
| 01 | ಚಿ.ನಾ.ಹಳ್ಳಿ | 28 | 560 | 559 | 515 | 507 | ಬಸವ ವಸತಿ ಯೋಜನೆಯಡಿ 2013-14ನೇ ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ ತಲಾ 20 ಮನೆಗಳಂತೆ ಗುರಿಯನ್ನು ನಿಗಮದಿಂದ ನಿಗಧಿಪಡಿಸಲಾಗಿದೆ. |
| 02 | ಗುಬ್ಬಿ | 33 | 660 | 660 | 625 | 604 | |
| 03 | ಕೊರಟಗೆರೆ | 23 | 460 | 460 | 467 | 464 | |
| 04 | ಕುಣಿಗಲ್ | 36 | 720 | 710 | 339 | 311 | |
| 05 | ಮಧುಗಿರಿ | 39 | 780 | 780 | 839 | 839 | |
| 06 | ಪಾವಗಡ | 33 | 660 | 656 | 964 | 952 | |
| 07 | ಶಿರಾ | 36 | 720 | 719 | 816 | 811 | |
| 08 | ತಿಪಟೂರು | 26 | 520 | 511 | 330 | 324 | |
| 09 | ತುಮಕೂರು | 41 | 820 | 798 | 857 | 818 | |
| 10 | ತುರುವೇಕೆರೆ | 26 | 520 | 518 | 258 | 252 | |
| | ಒಟ್ಟು | **321** | **6420** | **6371** | **6010** | **5882** | |

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ.ಆರ್.ಸಿ.ಆಂಜನಪ್ಪರವರು ಮಾತನಾಡಿ, ವಿವಿಧ ಯೋಜನೆಗಳ ಲೆಕ್ಕಶೀರ್ಷಿಕೆಗಳಡಿ ಮೀಸಲಿಟ್ಟಿರುವ ಶೇಕಡ .3ರ ಅನುದಾನದ ಬಗ್ಗೆ ಪ್ರಸ್ತಾಪಿಸುತ್ತಾ, ಈ ನಿಟ್ಟಿನಲ್ಲಿ ಅಂಗವಿಕಲರ ಸೌಲಭ್ಯಕ್ಕೆ ಸರಿಯಾಗಿ ಬಳಕೆಯಾಗಿರುವುದಿಲ್ಲ. ಇವರುಗಳು ಸೌಲಭ್ಯದಿಂದ ವಂಚಿತರಾಗಿದ್ದು, ಸರ್ಕಾರದ ಆದೇಶ/ಸುತ್ತೋಲೆಯ ಮಾರ್ಗಸೂಚಿಯಂತೆ ಅಂಗವಿಕಲರಿಗಾಗಿ ಮೀಸಲಿಟ್ಟಿರುವ ಹಣವನ್ನು ಅವರ ಕ್ಷೇಮಾಭಿವೃದ್ಧಿಗೆ ಭರಿಸಲು ಸಭೆಯ ಗಮನಕ್ಕೆ ತಂದರು. ಮುಂದುವರೆದು ಮಾತನಾಡಿ, ಜಿಲ್ಲೆಯಲ್ಲಿ ಸುಮಾರು 52,000 ಅಂಗವಿಕಲರಿದ್ದು, ಪಾವಗಡ ತಾಲ್ಲೂಕಿನಲ್ಲಿ 7500 ಅಂಗವಿಕಲರಿದ್ದಾರೆ. ಅವರ ಬದುಕಿನ ಪ್ರಶ್ನೆ ಏನು, ಅವರು ಸಮಾಜದಲ್ಲಿ ಗೌರವಯುತವಾಗಿ ಬಾಳಲು ಮಾನವೀಯ ದೃಷ್ಟಿಯಿಂದ ನಾವೆಲ್ಲರೂ ಒಗ್ಗೂಡಿ ಸರ್ಕಾರ ಅವರಿಗೆ ಒದಗಿಸಿರುವ ಸವಲತ್ತು/ಸೌಲಭ್ಯಗಳನ್ನು ನೀಡುವುದು ಆದ್ಯ ಕರ್ತವ್ಯವಾಗಿರುತ್ತದೆ. ಕೆಲವು ತಾ: ಗಳಲ್ಲಿ

ಅವರಿಗಾಗಿ ಮೀಸಲಿಟ್ಟಿರುವ ಶೇ.3ರಅನುದಾನ ಸರಿಯಾಗಿ ಸದ್ಬಳಕೆಯಾಗಿಲ್ಲ. ಗ್ರಾಮ ಪಂಚಾಯತಿ ಗಳಿಂದ ಕೇವಲ ಶೇ.30% ಮಾತ್ರ ಸೌಲಭ್ಯ ಒದಗಿಸಿದ್ದು, ತಾಲ್ಲೂಕು ಪಂಚಾಯತಿಯಲ್ಲಿಯೇ ಕ್ರೋಢೀಕರಿಸಿ; ತಾಲ್ಲೂಕು ಮಟ್ಟದಲ್ಲಿ ಹಂಚಿಕೆ ಮಾಡುವುದು ಸೂಕ್ತವೆಂದು ತಿಳಿಸುತ್ತಾ, ಈಗಾಗಲೇ ಪಾವಗಡ ತಾ:ನಲ್ಲಿ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು ಪಾವಗಡ ತಾಲ್ಲೂಕಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಸಂಸದರಲ್ಲಿ ಮನವಿ ಮಾಡಿದರು.

ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣರವರು ಮಾತನಾಡಿ, ಆರ್ಥಿಕ ವರ್ಷವು ಮುಕ್ತಾಯದ ಹಂತದಲ್ಲಿರುವುದರಿಂದ ಕೂಡಲೇ ಎಲ್ಲಾ ಇಲಾಖೆಗಳಿಂದ ಶೇ.3ರ ಹಣವನ್ನು ಅಂಗವಿಕಲರಿಗಾಗಿ ಬಳಸಲು ಕ್ರೋಢೀಕರಿಸಿ ಕ್ರಮ ವಹಿಸಲು ಸಭೆಯ ಗಮನಕ್ಕೆ ತಂದರು.

ಮು.ಕಾ.ನಿ.ಅ.ರವರು ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುಷ್ಠಾನ ಗೊಳಿಸಲಾಗುತ್ತಿರುವ ಯೋಜನೆಗಳಿಗೆ ಬಿಡುಗಡೆಯಾಗುತ್ತಿರುವ ಅನುದಾನದಲ್ಲಿ ಶೇ.3 ರಷ್ಟು ಹಣವನ್ನು ಅಂಗವಿಕಲರ ಏಳಿಗೆಗಾಗಿ ಮೀಸಲು ಇಡಬೇಕಾಗುತ್ತದೆ. ಗ್ರಾ.ಪಂ/ತಾ.ಪಂ/ಜಿ.ಪಂ ನಲ್ಲಿ ಅಂಗವಿಕಲರಿ ಗಾಗಿಯೇ ಸದ್ಬಳಕೆ ಮಾಡಬೇಕಾಗುತ್ತದೆ. ಆದುದರಿಂದ ಗ್ರಾ.ಪಂ/ ತಾ.ಪಂ/ ಜಿ.ಪಂ ಮಟ್ಟದ ಇಲಾಖೆ ಗಳಿಂದ ವಿವರ ಪಡೆದು ಕ್ರೋಢೀಕರಿಸಿ ಪ್ರತ್ಯೇಕ ಕ್ರಿಯಾ ಯೋಜನೆ ತಯಾರಿಸಿ ಹಣ ಸದ್ಬಳಕೆ ಮಾಡಲು ಮುಖ್ಯ ಯೋಜನಾಧಿಕಾರಿಗಳು ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಸೂಚಿಸಿದರು.

**(ಕ್ರಮ: ಮುಖ್ಯ ಯೋಜನಾಧಿಕಾರಿಗಳು, ಜಿ.ಪಂ.ತುಮಕೂರು)**

ಮಾನ್ಯ ಸಂಸದರು ಮಾತನಾಡಿ, ಈಗಾಗಲೇ ಬರಪೀಡಿತ ಪ್ರದೇಶಗಳನ್ನು ಗುರುತಿಸಲು (asses) ಕೇಂದ್ರ ತಂಡವು ಜಿಲ್ಲೆಗೆ ಆಗಮಿಸಿ; ಶಿರಾ, ಕೊರಟಗೆರೆ, ಪಾವಗಡ, ಮಧುಗಿರಿ, ಚಿ.ನಾ.ಹಳ್ಳಿಗಳನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ ಮಧುಗಿರಿ ತಾ:ನ ಕೊಡಿಗೆಹಳ್ಳಿ, ಚಿ.ನಾ.ಹಳ್ಳಿಯ ಕೆಲವು ಭಾಗ, ತುಮಕೂರು ತಾ: ಕೋರ ಹೋಬಳಿಯಲ್ಲಿ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚು ಇದ್ದು, ಆ ಭಾಗದ ಜನರು ತೊಂದರೆಗೆ ಒಳಗಾಗಿದ್ದಾರೆ. ಈ ಸಂಬಂಧ ಸರ್ಕಾರದ ಮಟ್ಟದಲ್ಲಿ ಚರ್ಚಿಸಿದ್ದು, ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ. ಆರ್. ಉಮೇಶ್ ರವರು ಮಾತನಾಡಿ ಜಿಲ್ಲೆಯಲ್ಲಿ ತೆಂಗು ಬೆಳೆಗಾರರು ಬೆಳೆ ನಷ್ಟ ಅನುಭವಿಸುತ್ತಿದ್ದು, ಬಹಳ ಕಂಗಾಲಾಗಿದ್ದಾರೆ. ತೆಂಗಿನ ತೋಟಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ರೋಗಗಳು ಆವರಿಸುತ್ತಿದ್ದು, ತೆಂಗು ಬೆಳೆ ನಾಶ ವಾಗುತ್ತಿದೆ, ಇವರಿಗೆ ಸರ್ಕಾರದಿಂದ ಪುನ:ಶ್ಚೇತನ ಕಾರ್ಯಕ್ರಮ ಮಾಡಿ ವೈಜ್ಞಾನಿಕವಾಗಿ ತೆಂಗು ಬೆಳೆ ಉತ್ಪಾದನೆ ಹೆಚ್ಚಿಸುವ ಕ್ರಮ ಕೈಗೊಳ್ಳಬೇಕು ಎಂದು ಸಭೆಯ ಗಮನಕ್ಕೆ ತಂದಾಗ, ಮಾನ್ಯ ಸಂಸದರು ಮಾತನಾಡಿ, ಜಿಲ್ಲೆಯ ಚಿ.ನಾ.ಹಳ್ಳಿ. ತುರುವೇಕೆರೆ, ತಿಪಟೂರು ಭಾಗಗಳಲ್ಲಿ ಹೆಚ್ಚು ತೆಂಗು ಬೆಳೆಗಾರರಿದ್ದು, ಸುಮಾರು 10 ಲಕ್ಷ ತೆಂಗಿನ ಮರಗಳು ರೋಗದ ಹಾವಳಿಗೆ ಸಿಲುಕಿ ನಾಶಹೊಂದಿರುತ್ತವೆ. ಜಿಲ್ಲೆಯಲ್ಲಿ 2.5 ಲಕ್ಷ ಎಕರೆ ತೆಂಗಿನತೋಟಗಳವೆ. ನಾಲಾ ಪ್ರದೇಶಗಳಲ್ಲಿ ತೆಂಗು ಬೆಳೆಯಬೇಕು,ಬರಡು ಭೂಮಿಯಲ್ಲಿ ತೆಂಗು ಬೆಳೆ ಇಳುವರಿ ನೀಡಲು ಸಾಧ್ಯವಾಗುವುದಿಲ್ಲ; ಸುಳಿ ಬಿದ್ದಿರುವ ಒಂದು ಮರಕ್ಕೆ 1200/- ರೂ. ಪರಿಹಾರ ನೀಡಲಾಗುತ್ತಿದೆ, NHM ನಲ್ಲಿ ಅವಕಾಶ ಕಲ್ಪಿಸಿಕೊಂಡು ರೈತರಿಗೆ ಅನುಕೂಲ ಕಲ್ಪಿಸಬಹುದು, ಗುಬ್ಬಿ ತಾ:ನಲ್ಲಿ 40000 ಎಕರೆ ರೋಗಕ್ಕೆ ತುತ್ತಾಗಿದೆ, ಕಳೆದ ವರ್ಷ ಲಿಫ್ಟ್ ಇರಿಗೇಷನ್ ಮಾಡಿ

Modernaization ಮಾಡುವುದಕ್ಕೆ ಸರ್ಕಾರ ಹಣ ಬಿಡುಗಡೆ ಮಾಡಿದ್ದು, ರೂ.950 ಕೋಟಿಗಳ ಪರಿಹಾರಕ್ಕಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರವನ್ನು ಕೋರಿದೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯರವರು ಮಾತನಾಡಿ, ಚಿ.ನಾ.ಹಳ್ಳಿ ತಾ:ನಲ್ಲಿ PMGSY ಯೋಜನೆಯಡಿ ಕೈಗೊಳ್ಳಬೇಕಾದ ರಸ್ತೆ ಕಾಮಗಾರಿಗಳು ಇನ್ನೂ ಪ್ರಾರಂಭ ಮಾಡಿರುವುದಿಲ್ಲ, ಆ ಭಾಗದ ಜನರು ರಸ್ತೆ ಸೌಕರ್ಯವಿಲ್ಲದೆ ತೊಂದರೆಗೆ ಒಳಗಾಗಿದ್ದಾರೆ. ಉದಾ: ಕಾಮಾಲಾಪುರ ರಸ್ತೆ ಕಾಮಗಾರಿ ಟೆಂಡರ್ ಆಗಿದ್ದರೂ ಸಹ ಕಾಮಗಾರಿ ಇನ್ನು ಪ್ರಾರಂಭವಾಗಿರುವುದಿಲ್ಲ ಎಂದು ತಿಳಿಸಿದಾಗ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ. ಚಿ.ನಾ.ಹಳ್ಳಿ ರವರು ಮಾತನಾಡಿ, 3 ಕಾಮಗಾರಿಗಳನ್ನು ಮಾತ್ರ ಪ್ರಾರಂಭ ಮಾಡಬೇಕಾಗಿದೆ ಎಂದು ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್, PMGSY ರವರು ಮಾತನಾಡಿ, ಸದರಿ ಕಾಮಗಾರಿಗಳನ್ನು ಪ್ರಾರಂಭಿಸುವುದಕ್ಕೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ನೋಟೀಸ್ ನೀಡಿ ಒಂದು ವಾರದೊಳಗಾಗಿ ಕಾಮಗಾರಿ ಪ್ರಾರಂಭಿಸುವುದಕ್ಕೆ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮು.ಕಾ.ನಿ.ಅ. ರವರು ಮಾತನಾಡಿ, ಕೂಡಲೇ ಕಾಮಗಾರಿಯನ್ನು ಪ್ರಾರಂಭ ಮಾಡಿ ಹದಿನೈದು ದಿವಸದೊಳಗೆ ಪೂರ್ಣಗೊಳಿಸುವಂತೆ ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್, PMGSY ತುಮಕೂರು)**

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಬಡೀರಣ್ಣ ರವರು ಮಾತನಾಡಿ, ಕಳೆದ 5 ವರ್ಷಗಳಿಂದ ಶಿರಾ ತಾಲ್ಲೂಕು ಬರಪೀಡಿತಕ್ಕೆ ಒಳಗಾಗಿದ್ದು, ಬರಗಾಲ ಎದುರಿಸುತ್ತಿದೆ; ಈವರೆಗೂ ಬರಗಾಲ ಸಮಿತಿ ಸಭೆ ಮಾಡಿರುವುದಿಲ್ಲ; ಸಭೆ ನಡೆದಿದ್ದರೆ ಜಾನುವಾರುಗಳಿಗಾದರೂ ಮೇವು ಒದಗಿಸುವ ಬಗ್ಗೆ ಸಭೆಯಲ್ಲಿ ಕ್ರಮ ಕೈಗೊಳ್ಳಬಹುದಾಗಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮು.ಕಾ.ನಿ.ಅ.ರವರು ಮಾತನಾಡಿ, ಈ ವರ್ಷ ಕುಡಿಯುವ ನೀರು ಕ್ರಿಯಾ ಯೋಜನೆ ಮಾಡುವ ಸಂಧರ್ಬದಲ್ಲಿ ಎಲ್ಲಾ ತಾಲ್ಲೂಕುಗಳಿಂದಲೂ ಪಟ್ಟಿ ಪಡೆದು ಸುಮಾರು 9.60 ಕೋಟಿ ರೂ.ಗಳ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗಿದೆ; ಜಾನುವಾರುಗಳ ಮೇವಿಗಾಗಿ 70 ಲಕ್ಷ ಮೆ.ಟನ್ ಆಹಾರದ ಅಗತ್ಯವಿದೆ, ಸುಮಾರು 10 ಲಕ್ಷ ಮೆ.ಟನ್ ಆಹಾರ ಲಭ್ಯವಿದ್ದು, ಫೆಬ್ರವರಿ, ಮಾರ್ಚ್ ವರೆಗೂ ಸಾಕಾಗುತ್ತದೆ. ಹೆಚ್ಚಿನ ಮೇವಿಗಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಟಾಸ್ಕ್ ಪೋರ್ಸ್ ಸಮಿತಿ ರಚನೆ ಮಾಡಿ, ಸಭೆ ಕರೆದು ಈ ಮಾಸಾಂತ್ಯದೊಳಗೆ ಹಣ ಸದ್ಬಳಕೆ ಮಾಡುವಂತೆ ಮಾನ್ಯ ಶಾಸಕರುಗಳಿಗೆ ರಾಜ್ಯ ಸರ್ಕಾರವು ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಜಿ.ಪಂ.ನ ಮಾನ್ಯ ಸದಸ್ಯರುಗಳಾದ ಶ್ರೀ ಬಿ.ಕೆ.ಬಡೀರಣ್ಣ ಮತ್ತು ಶ್ರೀ. ಸಿ.ಆರ್.ಉಮೇಶ್ ರವರುಗಳು ಮಾತನಾಡಿ, ಮುಂದಿನ ಜಿ.ಪಂ. ಸಾಮಾನ್ಯ ಸಭೆಯನ್ನು ಶಿರಾ ತಾಲ್ಲೂಕು ಕೇಂದ್ರಸ್ಥಾನದಲ್ಲಿ ಏರ್ಪಡಿಸುವಂತೆ ಸಭೆಯಲ್ಲಿ ಕೋರಿದರು.

**(ಕ್ರಮ: ಉಪ ಕಾರ್ಯದರ್ಶಿ (ಅಭಿವೃದ್ಧಿ) ಜಿ.ಪಂ. ತುಮಕೂರು)**

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯ ರವರು ಮಾತನಾಡಿ, SGSY ಯೋಜನೆಯಡಿ ಕುಣಿಗಲ್ ತಾಲ್ಲೂಕಿನ ಕೆಂಚನಹಳ್ಳಿ, ಜೋಡಿ ಹೊಸಹಳ್ಳಿ ಗ್ರಾ.ಪಂ.ನ ಎಡೇಹಳ್ಳಿ ಗ್ರಾಮಗಳಲ್ಲಿ ಮಾರಾಟಮಳಿಗೆ ನಿರ್ಮಾಣ ಮತ್ತು ಸ್ತ್ರೀಶಕ್ತಿ ಸಂಘಗಳ ಕಟ್ಟಡಕ್ಕೆ ಮಂಜೂರಾತಿ ನೀಡಿದ್ದು, ಕಾಮಗಾರಿ ಅನುಷ್ಠಾನ ಗೊಳಿಸಿರುವುದಿಲ್ಲ. ಪ್ರಸ್ತುತ ಈ ಯೋಜನೆಯು ಮುಕ್ತಾಯವಾಗಿದ್ದು NRLM ನಲ್ಲಿ ಕೈಗೆತ್ತಿಕೊಂಡು ಸದರಿ ಕಾಮಗಾರಿಗಳನ್ನು ನಿರ್ವಹಿಸಲು ಸಭೆಯ ಗಮನಕ್ಕೆ ತಂದರು.

ಮುಂದುವರದು ಸದಸ್ಯರು ಮಾತನಾಡಿ, ಎಲಿಯೂರು ಪಂ. ಕಲ್ಲನಾಯ್ಕನಹಳ್ಳಿ,ಅಮೃತೂರು ಹೋ: ಕೆ.ಹೊನ್ನಮಾಚನಹಳ್ಳಿ, ಹಾಲಪ್ಪನಗುಡ್ಡೆ ಗ್ರಾಮಗಳಲ್ಲಿ ಕಾಮಗಾರಿ ಪ್ರಾರಂಭ ಮಾಡಿ ಭಾಗಶ: ಪೂರ್ಣಗೊಂಡಿದ್ದು, ಹಣ ಖರ್ಚು ಮಾಡಲಾಗಿದೆ. ಉಳಿದ ಹಣ ತಾ.ಪಂ.ಗೆ ವಾಪಸ್ಸು ಹೋಗಿರುತ್ತದೆ. ಆದುದರಿಂದ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು NRLM ನಲ್ಲಿ ಭರಿಸಲು ತಿಳಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು,ಡಿ.ಆರ್.ಡಿ.ಎ. ಜಿ.ಪಂ. ತುಮಕೂರು)**

ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಗುಬ್ಬಿರವರು ಮಾತನಾಡಿ, ಜಿಲ್ಲಾ ಪಂಚಾಯತಿ ವತಿಯಿಂದ ಖರೀದಿಸಲಾಗಿರುವ Sucking Machine ಯಂತ್ರಗಳ ಬಗ್ಗೆ ವಿವರಗಳನ್ನು ಒದಗಿಸಲು ಮಾನ್ಯ ಅಧ್ಯಕ್ಷರಲ್ಲಿ ಕೋರಿದರು. ಈ ಬಗ್ಗೆ ವಿವರವಾದ ವರದಿಯನ್ನು ನೀಡಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರಿಗೆ ಸೂಚಿಸಿದರು; ಉಪ ಕಾರ್ಯದರ್ಶಿ (ಅಭಿವೃದ್ಧಿ) ರವರು ಸಭೆಗೆ ಮಾಹಿತಿಯನ್ನು ಒದಗಿಸುತ್ತಾ, ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ/250/ಜಿಪಸ/2011(ಭಾಗ-1)ದಿನಾಂಕ:01-03-2012 ರಂತೆ ರಾಜ್ಯದಲ್ಲಿ The Employment of Manual Scavengers and Construction of Dry Latrines(Prohibition) Act-1993ರಡಿ ತಲೆಯ ಮೇಲೆ ಮಲಹೊರುವ ಪದ್ಧತಿಯನ್ನು ನಿಷೇದಿಸಿರುವುದರಿಂದ ಪ್ರಧಾನ ಕಾರ್ಯದರ್ಶಿಗಳು ಮೇಲ್ಕಂಡ ಸುತ್ತೋಲೆಯಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಆಧ್ಯತೆಯಲ್ಲಿ ಜಿಲ್ಲಾ ಮಟ್ಟದ ಖರೀದಿ ಸಮಿತಿ ರಚಿಸಿ, ಪ್ರತಿ ತಾಲ್ಲೂಕಿಗೆ ಶೌಚಗುಂಡಿಗಳನ್ನು ಸ್ವಚ್ಛಗೊಳಿಸಲು 1000Ltr. ಸಾಮರ್ಥ್ಯದ 4 ಅಥವಾ 3000Ltr. ಸಾಮರ್ಥ್ಯದ 2 Sucking Machine ಯಂತ್ರಗಳನ್ನು ಖರೀದಿಸಲು ಸೂಚಿಸಲಾಗಿರುತ್ತದೆ ಎಂದು ತಿಳಿಸಿದರು. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಮುಖ್ಯ ಲೆಕ್ಕಾಧಿಕಾರಿಗಳು, ಜಿ.ಪಂ., ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮತ್ತು ಆಯಾಯ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರ ಸದಸ್ಯತ್ವವನ್ನು ಹೊಂದಿರುವ ಸಮಿತಿಯನ್ನು ರಚಿಸಿ ಉಪಕಾರ್ಯದರ್ಶಿ (ಅಭಿವೃದ್ಧಿ)ರವರ ಸಂಚಾಲನೆಯಲ್ಲಿ ಖರೀದಿ ಸಮಿತಿಯನ್ನು ಮಾಡಲಾಗಿದ್ದು, ಅದರಂತೆ ದಿನಾಂಕ:26-12-2012ರಂದು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲಾಗಿರುತ್ತದೆ ಎಂದು ತಿಳಿಸಿದರು.

ಹಾಗೂ ದಿನಾಂಕ:07-07-2012ರಂದು ಕನ್ನಡಪ್ರಭ ಮತ್ತು ಪ್ರಜಾ ಪ್ರಗತಿ ದಿನ ಪತ್ರಿಕೆಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ ಎಂದು ತಿಳಿಸಿದರು. ಮತ್ತು ಸರ್ಕಾರದ ನಿರ್ದೇಶನದಂತೆ ಸದರಿ ಪ್ರಕ್ರಿಯೆಯನ್ನು ರದ್ದುಗೊಳಿಸಿ ದಿನಾಂಕ:11-10-2012ರಂದು e.tender ಕರೆದು, e.tender ಪ್ರಕ್ರಿಯೆಯನ್ನು ದಿನಾಂಕ:15-10-2012ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಳಿಸಿ

ದಿ:24-05-2013ರಂದು ಜಿಲ್ಲಾ ಮಟ್ಟದ ಪರಾಮರ್ಶದ ಸಮಿತಿಯನ್ನು ಕರೆದು ಬಿಡ್ ದಾರರ ದಾಖಲೆಗಳನ್ನು ಪರಿಶೀಲಿಸಿ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಿ, ಅದರಂತೆ ಪ್ರತಿ Sucking Machine ಗೆ ಬಿಡ್ ದಾರರು ಧರ ನಿಗಧಿಪಡಿಸಿರುವ ರೂ.11,22,100/-ಗಳ ಬಿಡನ್ನು ಬಿಡ್ ದಾರರಾದ ಶ್ರೀ ಆರ್.ಕೆ.ಇಂಡಸ್ಟ್ರೀಸ್, ಬೆಂಗಳೂರುರವರೊಂದಿಗೆ ಧರಸಂಧಾನ ನಡೆಸಿ ರೂ.10,50,000/-ಗಳಿಗೆ ಖರೀದಿಸಲು ಸಮಿತಿಯಲ್ಲಿ ತೀರ್ಮಾನಿಸಲಾಯಿತು; ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಸದರಿ ಯಂತ್ರಕ್ಕೆ ರೂ.9,73,250/- ಗಳನ್ನು ನಿಗಧಿ ಮಾಡಿದ್ದು, ಕೋಲಾರ ಜಿಲ್ಲಾ ಪಂಚಾಯತಿಯಲ್ಲಿ ರೂ.10,60,000/-ಗಳಿಗೆ ಸದರಿ ಯಂತ್ರಗಳನ್ನು ಖರೀದಿಸಿರುವುದನ್ನು ಆಧಾರವಾಗಿರಿಸಿಕೊಂಡು ತುಮಕೂರು ಜಿಲ್ಲೆಗೆ ಸದರಿ ನಮೂನೆಯ (3000 ಲೀಟರ್) ಯಂತ್ರವನ್ನು ರೂ.10,50,000/-ಗಳಿಗೆ ಖರೀದಿಸಲು ಖರೀದಿ ಸಮಿತಿಯಲ್ಲಿ ನಡವಳಿ ನಡೆಸಲಾಯಿತು ಎಂದು ತಿಳಿಸಿದರು. ಮುಂದುವರೆದು ದರ ಸಂಧಾನದ ವಿವರಗಳು ಈ ಕೆಳಗಿನಂತೆ ಇರುತ್ತದೆಂದು ಓದಿ ಸಭೆಗೆ ತಿಳಿಸಿದರು.

| ವಿವರ | ವೆಚ್ಚ |
|---|---|
| ಸಕ್ಕಿಂಗ್ ಯಂತ್ರದ ಮೂಲ ದರ | ರೂ.7,98,000/- |
| ಸಿ.ಎಸ್.ಟಿ. ಶೇ.4 ರಷ್ಟು | ರೂ.31,920/- |
| ಒಟ್ಟು | ರೂ.8,29,920/- |
| ಎಂಟ್ರಿ ಟಾಕ್ಸ್ ಶೇ.2ರಷ್ಟು | ರೂ.16,598/- |
| ಒಟ್ಟು | ರೂ.8,46,518/- |
| ವ್ಯಾಟ್ ಶೇ.14.5ರಷ್ಟು | ರೂ.1,22,745/- |
| ಒಟ್ಟು | ರೂ.9,62,264/- |
| ಸಾಗಾಣಿಕೆ ವೆಚ್ಚಗಳು | ರೂ.60,000/- |
| ಲೋಡಿಂಗ್, ಅನ್ ಲೋಡಿಂಗ್,ಡೆಲಿವರಿ ವೆಚ್ಚಗಳು | ರೂ.27,736/- |
| ಒಟ್ಟು ದರ ಒಂದಕ್ಕೆ | **ರೂ.10,50,000/-** |

ಈ ಸಂದರ್ಭದಲ್ಲಿ ಸದರಿ ಯಂತ್ರಕ್ಕೆ ಒಂದು ಟ್ರಾಕ್ಟರ್ ಅನ್ನು ಖರೀದಿಸಬೇಕಾಗಿದ್ದು, ಪ್ರತಿ ತಾಲ್ಲೂಕು ಪಂಚಾಯತಿ ವತಿಯಿಂದ ಟ್ರಾಕ್ಟರ್ ಖರೀದಿಸಲು ಈಗಾಗಲೇ ಎಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಆದೇಶ ನೀಡಲಾಗಿದ್ದು, ಕೂಡಲೇ ಖರೀದಿಸಲು ಕೋರಿದರು.

ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಟ್ರಾಕ್ಟರ್ ಯಂತ್ರವನ್ನು ಖರೀದಿಸುವವರೆಗೆ ಬಾಡಿಗೆ ಆಧಾರದಲ್ಲಿ ಟ್ರಾಕ್ಟರ್ ಗಳನ್ನು ಪಡೆದು ಶೌಚಗುಂಡಿಗಳನ್ನು ಸ್ವಚ್ಛಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಕ್ರಮವಹಿಸಲು ಸೂಚಿಸಿದರು; ಯಾವುದೇ ಕಾರಣಕ್ಕೆ ಖರೀದಿಸುವ ಯಂತ್ರಗಳನ್ನು ನಿರುಪಯುಕ್ತವಾಗಿ ಪಂಚಾಯತಿಗಳ ಮುಂದೆ ನಿಲ್ಲಿಸಬಾರದಾಗಿ ತಿಳಿಸಿದರು; ಈ ಬಾಬ್ತಿಗೆ ಜಿಲ್ಲಾ ಪಂಚಾಯತಿಗೆ ತಾಲ್ಲೂಕು

ಪಂಚಾಯತಿಯಿಂದ ನೀಡಿರುವ ರೂ.1300000/- ಅನುದಾನದಲ್ಲಿ ಉಳಿದಿರುವ ರೂ.2,50,000/- ಗಳನ್ನು ತಾಲ್ಲೂಕು ಪಂಚಾಯತಿಗೆ ಮರು ವಾಪಸ್ ನೀಡಲು ಮುಖ್ಯ ಲೆಕ್ಕಾಧಿಕಾರಿಯವರಿಗೆ ಸೂಚಿಸಿದರು.

(ಕ್ರಮ: ಮುಖ್ಯ ಲೆಕ್ಕಾಧಿಕಾರಿ, ಜಿ.ಪಂ. ತುಮಕೂರು)

**ವಿಷಯ ಸೂಚಿ: 1 ಜಿಲ್ಲಾ ಪಂಚಾಯತಿಯ ವಿವಿಧ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಅನುಮೋದಿಸುವ ಬಗ್ಗೆ.**

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸ್ಥಾಯಿ ಸಮಿತಿಗಳಿಗೆ ವಿಷಯಗಳನ್ನು ಮಂಡಿಸುವ ಮುನ್ನಾ ಮುಖ್ಯ ಕಾರ್ಯನಿರ್ವಾಹಕಅಧಿಕಾರಿಯವರ ಗಮನಕ್ಕೆ ತಂದು ಪೂರ್ವಾನುಮತಿ**

**ಪಡೆದು ಸಂಬಂಧಿಸಿದ ಸ್ಥಾಯಿಸಮಿತಿಗಳಿಗೆ ಮಂಡಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಭೆಯಲ್ಲಿ ತಿಳಿಸಿದರು.**

**a) ದಿನಾಂಕ: 19-12-2013 ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ದಿನಾಂಕ:19-12-2013 ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಆರ್.ಸಿ. ಆಂಜಿನಪ್ಪರವರು ಮಾತನಾಡಿ, ಪಾವಗಡ ತಾ:ನಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸುವಂತೆಯೂ ಹಾಗೂ ಹುದ್ದೆಗಳ ವಿವರವನ್ನು ನೀಡಬೇಕೆಂದು ಸಭೆಯಲ್ಲಿ ಆಗ್ರಹಿಸಿದಾಗ, ಉಪ ನಿರ್ದೇಶಕರು, ಸಾ.ಶಿ.ಇಲಾಖೆ, ಮಧುಗಿರಿರವರು ಮಾತನಾಡಿ, ಪಾವಗಡ ತಾ:ನಲ್ಲಿ 170 ಹುದ್ದೆ ಖಾಲಿ ಇರುತ್ತದೆ; ನಕ್ಸಲು ಪೀಡಿತ ಪ್ರದೇಶದಲ್ಲಿ70 ಶಿಕ್ಷಕರಿಗೆ ಆದೇಶ ನೀಡಿ ಖಾಲಿ ಹುದ್ದೆ ತುಂಬಲಾಗಿದೆ; ಈ ವರ್ಷ 62 ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿ ಸಂಪೂರ್ಣ ಮಾಹಿತಿಯನ್ನು ಸಭೆಗೆ ನೀಡಿದರು.

ಮುಂದುವರೆದು ಮಾನ್ಯ ಸದಸ್ಯರಾದ ಶ್ರೀ ಆರ್.ಸಿ. ಆಂಜಿನಪ್ಪರವರು ಮಾತನಾಡಿ, RMSA ಕಟ್ಟಡ ಕಾಮಗಾರಿಗಳು ಜಿಲ್ಲೆಯಲ್ಲಿ ಎಲ್ಲೆಲ್ಲಿ ಪ್ರಾರಂಭವಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಲಾಗಿ, ಪಾವಗಡ ತಾ:ನಲ್ಲಿ 7 ಬಲವರ್ಧನೆ ಪ್ರೌಢಶಾಲೆ ಪ್ರಾರಂಭವಾಗಿದೆ; ಆದರ್ಶ ವಿದ್ಯಾಲಯದ ಸ್ಥಳ ಸಮಸ್ಯೆಯಿದ್ದು ಶಾಸಕರ ಗಮನಕ್ಕೆ ತರಲಾಗಿದೆ; ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಸ್ಥಳ ಹುಡುಕಲಾಗುತ್ತಿದೆ; ಕೊಂಡವಾಡಿಯಲ್ಲಿ 4 ಎಕರೆ ಪ್ರದೇಶವನ್ನು ತಹಶೀಲ್ದಾರ್ ರವರು ಸರ್ವೆ ಮಾಡಿದ್ದು ಉಪ ವಿಭಾಗಾಧಿಕಾರಿಯವರ ಕಛೇರಿಯಲ್ಲಿ ವಿಲೆಗೆ ತಡವಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಶಿರಾ ತಾಲ್ಲೂಕು ಗೋಣಿಹಳ್ಳಿ ಶಾಲಾ ಕಟ್ಟಡ ಕಾಮಗಾರಿಯ ಅವಧಿ ಪೂರ್ಣಗೊಂಡಿದ್ದರೂ ಕೆಲಸ ಪ್ರಾರಂಭವಾಗಿರುವುದಿಲ್ಲ; ಕೂಡಲೇ

ಕ್ರಮವಹಿಸಲು ತಿಳಿಸಿದಾಗ ಗೋಣಿಹಳ್ಳಿ ಇಂಜಿನಿಯರ್ ರವರನ್ನು ಭೇಟಿ ಮಾಡಿ ಆದಷ್ಟು ಬೇಗ ಕೆಲಸ ಪ್ರಾರಂಭ ಮಾಡಲು ಕ್ರಮವಹಿಸುವುದಾಗಿ B.E.O. ರವರು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕಅಧಿಕಾರಿಯವರು ಮಾತನಾಡಿ, RMSA ಬಗ್ಗೆ ಕಳೆದ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆಯಾಗಿರುತ್ತದೆ; ಈ ವರ್ಷ RMSAನಲ್ಲಿ ರೂ.30.00ಕೋಟಿ ಗಳಿಗೆ ಒಂದು ಟೆಂಡರ್ ಮಾಡಿ Agencyಗೆ ವಹಿಸಲಾಗಿದೆ; PRD ಇಂಜಿನಿಯರ್ ರವರು ಕಾಮಗಾರಿ quality ಬಗ್ಗೆ ಮೇಲ್ವಿಚಾರಣೆ ಮಾಡುತ್ತಾರೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ:ರವಿರವರು ಮಾತನಾಡಿ, ಸಂಬಂಧಪಟ್ಟ ತಾಲ್ಲೂಕಿನ BEOರವರು ಜಂಟಿ ಪರಿಶೀಲನೆ ಮಾಡುವುದು ಸೂಕ್ತವೆಂದು ಅಭಿಪ್ರಾಯಿಸಿದರು.

ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಬಡೀರಣ್ಣನವರು ಮಾತನಾಡಿ, ಶಾಖದಡು ಶಾಲಾ ಕಟ್ಟಡ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸುವುದಕ್ಕೆ ನಿರ್ಮಿತಿ ಕೇಂದ್ರದ ಅಧಿಕಾರಿಯವರಿಗೆ ತಿಳಿಸಿದರು.

ಸಭೆಯ ಅಧ್ಯಕ್ಷರು ಮಾತನಾಡಿ, ಜಕ್ಕೇನಹಳ್ಳಿ ಪ್ರೌಢಶಾಲೆಯ ಮೇಲ್ಛಾವಣಿ ಸರಿಪಡಿಸುವಂತೆ ತಿಳಿಸಿದರು.

**ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**b) ದಿನಾಂಕ:19-12-2013 ರಂದು ನಡೆದ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ದಿನಾಂಕ:19-12-2013 ರಂದು ನಡೆದ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**c) ದಿನಾಂಕ:20-12-2013ರಂದು ನಡೆದ ಹಣಕಾಸು ಲೆಕ್ಕಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಜಿ.ಪಂ.ನ ಮಾನ್ಯ ಅಧ್ಯಕ್ಷರು ದಿನಾಂಕ:20-12-2013ರಂದು ನಡೆದ ಹಣಕಾಸು ಲೆಕ್ಕಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳ ನಡವಳಿಯನ್ನು ಸಭೆಗೆ ಅನುಮೋದನೆಗಾಗಿ ಮಂಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ ಬಾಬುರವರು ಮಾತನಾಡಿ, ಶ್ರೀ ಚನ್ನಬಸವೇಶ್ವರ ಯುವಕ ಸಂಘ (ರಿ) ಗುಬ್ಬಿ ರವರು ಮನವಿ ನೀಡಿದ್ದು, ದಿನಾಂಕ:10-01-2014 ರಿಂದ 12-01-2014ರವರೆಗೆ ರಾಜ್ಯ ಮಟ್ಟದ ಹೊನಲು ಬೆಳಕಿನ ಪುರುಷರ ಮತ್ತು ಮಹಿಳೆಯರ ಹಾಗೂ ಅತಿ ಕಿರಿಯ ಬಾಲಕ-ಬಾಲಕಿಯರ ಖೊ-ಖೊ ಪಂದ್ಯಾವಳಿಗಳನ್ನು ನಡೆಸಲಿದ್ದು ಧನಸಹಾಯ ಕೋರಿದ್ದು, ಸಭೆಯಲ್ಲಿ

ರೂ.5000/- ಗಳ ಧನಸಹಾಯ ನೀಡಲು ತೀರ್ಮಾನಿಸಲಾಗಿರುತ್ತದೆ, ಕ್ರೀಡಾ ಚಟುವಟಿಕೆಗಳ ಪ್ರೋತ್ಸಾಹ ನೀಡಲು ಕನಿಷ್ಟ ರೂ.10000/- ಗಳ ಧನಸಹಾಯ ನೀಡಲು ಮತ್ತೊಮ್ಮೆ ಈ ಸಭೆಯಲ್ಲಿ ಕೋರಿದಾಗ, ಸಭೆಯು ಸರ್ವಾನುಮತದಿಂದ ಒಪ್ಪಿ ಸದರಿ ಶ್ರೀ ಚನ್ನಬಸವೇಶ್ವರ ಯುವಕ ಸಂಘ (ರಿ) ಗುಬ್ಬಿ ರವರಿಗೆ ರೂ.10000/- ಧನ ಸಹಾಯ ನೀಡಲು ತೀರ್ಮಾನಿಸಿತು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಕಟ್ಟಡ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನದಲ್ಲಿ ಉಳಿಕೆ ಇರುವ ರೂ.83.05 ಲಕ್ಷಗಳನ್ನು ಜಿಲ್ಲೆಯ 10 ತಾಲ್ಲೂಕುಗಳಲ್ಲಿರುವ ಶವಾಗಾರ ಕಟ್ಟಡಗಳ ಅಭಿವೃದ್ಧಿಗೆ ಭರಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿ.ಪಂ. ತುಮಕೂರು ರವರು ಕಛೇರಿಯ ಉಪಯೋಗಕ್ಕಾಗಿ Office chamber talble, 5 x 4" -1, Plastic chair-25, Officers chair-1 & All in one printer-1 ಗಳನ್ನು ಹೊಸದಾಗಿ ಖರೀದಿಸಲು ಸಮಿತಿಗೆ ಮಂಡಿಸಲಾಗಿದ್ದು, ಸಮಿತಿಯು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ,ಕಟ್ಟಡ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ಕಟ್ಟಡ ಕಾಮಗಾರಿಗಳಿಗೆ ಮಾತ್ರ ವಿನಿಯೋಗಿಸಲು ತಿಳಿಸಲಾಗಿತ್ತು. **ಆದರೆ ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಬಡೀರಣ್ಣ ರವರು ಮಾತನಾಡಿ, ಕಛೇರಿಯ ಉಪಯೋಗಕ್ಕೆ ಸದರಿ ಮೇಲ್ಕಂಡ ಕಛೇರಿ ಸಾಮಗ್ರಿಗಳು ಅವಶ್ಯಕತೆ ಇರುವುದರಿಂದ ಸಭೆಯು ಅನುಮತಿ ನೀಡಬೇಕೆಂದು ಗಮನಕ್ಕೆ ತಂದರು. ಸಭೆಯು ಸದಸ್ಯರ ಅಭಿಪ್ರಾಯವನ್ನು ಆಲಿಸಿ ಸದರಿ ಕಛೇರಿಗೆ ಅನುದಾನದ ಲಭ್ಯತೆಯನ್ನಾಧರಿಸಿ ಖರೀದಿ ನಿಯಮಾನುಸಾರ ಕ್ರಮ ವಹಿಸಲು ಸಭೆಯು ತೀರ್ಮಾನಿಸಿತು.**

**ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**c) ದಿನಾಂಕ:26-12-2013ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ದಿನಾಂಕ:26-12-2013ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸೂಚಿ: 2 ದಿನಾಂಕ:26-09-2013ರ ಸಾಮಾನ್ಯ ಸಭೆ ನಡವಳಿಯ ಅನುಪಾಲನ ವರದಿ ಬಗ್ಗೆ.**

**ದಿನಾಂಕ:26-09-2013** ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಗಳ ಅನ್ವಯ ಕೈಗೊಂಡ ಕ್ರಮದ ಬಗೆಗಿನ ಅನುಪಾಲನಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ ಸೂಚಿ: 3 ಅಧ್ಯಕ್ಷ ಅಪ್ಪಣೆ ಮೇರೆಗೆ ಚರ್ಚಿಸತಕ್ಕ ಇತರೆ ವಿಷಯಗಳು**

1. ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿರವರು ಮಾತನಾಡಿ, ಚಿ.ನಾ.ಹಳ್ಳಿ ತಾಲ್ಲೂಕಿನಲ್ಲಿ ಗಂಗ ಕಲ್ಯಾಣ ಯೋಜನೆಯಲ್ಲಿ ಮಂಜೂರಾದ ಕೊಳವೆಬಾವಿಗಳನ್ನು ಇದುವರೆಗೂ ಕೊರೆಯಿಸಿರುವುದಿಲ್ಲ; ಸಣ್ಣ ನೀರಾವರಿ ಇಲಾಖೆಯಲ್ಲಿ SCP ಯಲ್ಲಿ 17, TSPಯಲ್ಲಿ 8 ಕಾಮಗಾರಿಗಳನ್ನುಪ್ರಾರಂಭಿಸಿರುವುದಿಲ್ಲ; ಕೂಡಲೇ ಕಾಮಗಾರಿ ಪ್ರಾರಂಭಿಸುವಂತೆ ಕ್ರಮವಹಿಸಲು ತಿಳಿಸಿದರು.

2. ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಣಿರವರು ಮಾತನಾಡಿ, ನಿರ್ಮಿತಿ ಕೇಂದ್ರಕ್ಕೆ ವಹಿಸಲಾಗಿರುವ ಕಟ್ಟಡ ಕಾಮಗಾರಿಗಳು ಪೂರ್ಣಗೊಳಿಸಿರುವುದಿಲ್ಲ; ಕ್ರಮಕೈಗೊಂಡು ಕಾಮಗಾರಿ ಪೂರ್ಣಗೊಳಿಸಲು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕಅಧಿಕಾರಿಯವರು ಮಾತನಾಡಿ, ಜನವರಿ 15ರೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು; ತಪ್ಪಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಮಂಗಳ ಗೌರಮ್ಮ ರವರು ಮಾತನಾಡಿ, ಬಸಾಪುರ ಅಂಗನವಾಡಿ ಕಟ್ಟಡ ಬಹಳ ಶಿಥಿಲಗೊಂಡಿದ್ದು, ಅಂಗನವಾಡಿಗೆ ಹೋಗುವ ಮಕ್ಕಳಿಗೆ ಬಹಳ ತೊಂದರೆಯಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದಾಗ ಕೂಡಲೇ ಸದರಿ ಅಂಗನವಾಡಿಯನ್ನು ಶಾಲಾ ಆವರಣದಲ್ಲಿ ಖಾಲಿ ಇರುವ ಕಟ್ಟಡಕ್ಕೆ ಅಥವಾ ಬೇರೆಡೆಗೆ ಸ್ಥಳಾಂತರಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು ರವರಿಗೆ ಸೂಚಿಸಿದರು.

3. a) ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಎರಡು ಪಂ.ರಾ.ಇಂ.ವಿಭಾಗಗಳಿಂದ MGNREGA ಯೋಜನೆಯ ಕಾಮಗಾರಿಗಳಲ್ಲಿ AEEರವರು ಕಳುಹಿಸಿರುವ photoಗಳಲ್ಲಿ ಕೆಲವು ಕಡೆ ಯಂತ್ರೋಪಕರಣಗಳನ್ನು ಬಳಸಿಕೊಂಡಿರುವುದು ಕಂಡುಬಂದಿರುತ್ತದೆ ಎಂದು ಸಭೆಯ ಗಮನಕ್ಕೆ ತಂದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಪ್ರಸಕ್ತ ದರಸೂಚಿಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕು; ಈ ಬಗ್ಗೆ ನಿರ್ದೇಶಕರವರ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

b) ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಹಣಕಾಸು ಲೆಕ್ಕಪರಿಶೋಧನಾ ಸ್ಥಾಯಿ ಸಮಿತಿಗೆ (ಎರಡನೇ ಅವಧಿಯಲ್ಲಿ) ಶ್ರೀ ಪಿ.ಆರ್. ಸುಧಾಕರ್ ಲಾಲ್ ರವರು ಸದಸ್ಯರಾಗಿದ್ದರು ಅವರು ಶಾಸಕರಾಗಿ ಆಯ್ಕೆಯಾಗಿದ್ದು, ಆ ಸ್ಥಾನವು ಪ್ರಸ್ತುತ ತೆರವುಗೊಂಡಿರುವುದರಿಂದ ಸದರಿ ಸ್ಥಾನಕ್ಕೆ ಸದಸ್ಯರನ್ನು ಆಯ್ಕೆ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಲಾಗಿ, ಮಾನ್ಯಅಧ್ಯಕ್ಷರಿಗೆ ಜಿ.ಪಂ.ರವರಿಗೆ ಸದರಿ ಸ್ಥಾನಕ್ಕೆ ಸದಸ್ಯರನ್ನು ಆಯ್ಕೆ ಮಾಡಲು ಸಭೆಯು ಸರ್ವಾನುಮತದಿಂದ ಅಧಿಕಾರ ನೀಡಲಾಯಿತು.

c) ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಲೆಕ್ಕ ಶೀರ್ಷಿಕೆ 4702ರ ಕ್ರಿಯಾ ಯೋಜನೆ ಅನುಮೋದನೆ ಗೊಂಡು ಸರ್ಕಾರದಿಂದ ಅನುಮತಿ ನೀಡಲಾಗಿದೆ; ಜಿ.ಪಂ.ನಿಂದ ನಿರ್ವಹಿಸಲಾಗುವ ರೂ.5.00 ಲಕ್ಷದ ವರೆಗಿನ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದಲ್ಲಿ ಪಂ.ರಾ.ಇಂ.ವಿಭಾಗ, ತುಮಕೂರು ವತಿಯಿಂದ ನಿರ್ವಹಿಸಲಾಗುತ್ತಿದೆ; ಆದರೆ ಮಧುಗಿರಿ ವಿಭಾಗದಲ್ಲಿ ಏಕೆ ಟೆಂಡರ್ ಕರೆದು ಕಾಮಗಾರಿ ಅನುಷ್ಠಾನ ಮಾಡಿಸುತ್ತಿದ್ದಾರೆ; ಈ ಬಗ್ಗೆಮಾಹಿತಿ ನೀಡಬೇಕೆಂದು ಕೋರಿದರು.

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಧುಗಿರಿ ರವರು ಮಾತನಾಡಿ, 2008 ರಲ್ಲಿ ಸರ್ಕಾರದ ಮಾರ್ಗಸೂಚಿಯಂತೆ 2 ತಾಲ್ಲೂಕುಗಳಲ್ಲಿ ಟೆಂಡರ್ ಮಾಡಲಾಗಿದೆ ಎಂದು ತಿಳಿಸಿದಾಗ ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಕಳೆದ ವರ್ಷ 4702 ಇರಲಿಲ್ಲ; ಈ ವರ್ಷ ಜಿ.ಪಂ.ನಿಂದ ನಿರ್ವಹಿಸಬಹುದಾಗ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಬರುವ ಎಲ್ಲಾ ಯೋಜನೆಗಳ ರೂ.5.00ಲಕ್ಷ ವರೆಗಿನ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಬಹುದು ಎಂಬುದರ ಬಗ್ಗೆ ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸಲು ಸಭೆಯಲ್ಲಿ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, 2013ರ ಸುತ್ತೋಲೆಯಂತೆ ಕಾಮಗಾರಿಗಳ ಅನುಷ್ಠಾನ ಮಾಡುವ ಬಗ್ಗೆ ಕಾರ್ಯಪಾಲಕ ಇಂಜಿನಿರ್ ರವರು ಸ್ಪಷ್ಟೀಕರಣ ಕೇಳಿದರೆ ಕೊಡಬಹುದು ಎಂದು ತಿಳಿಸಿದರು.

(ಕ್ರಮ:ಉಪಕಾರ್ಯದರ್ಶಿಗಳು (ಅಭಿವೃದ್ಧಿ),ಜಿ.ಪಂ. ತುಮಕೂರು)

4. ಪಾವಗಡ ಮಾನ್ಯ ಶಾಸಕರು ಮಾತನಾಡಿ, ವಸತಿ ಯೋಜನೆ ಪ್ರಗತಿಯಾಗುತ್ತಿಲ್ಲ GPS ಬಗ್ಗೆ ಗ್ರಾ.ಪಂ.ನ P.D.O.ಗಳಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ನೀಡುವಂತೆ ಸಭೆಯಲ್ಲಿ ತಿಳಿಸಿದರು.

ಚರ್ಚಿಸತಕ್ಕ ವಿಷಯಗಳು ಮುಕ್ತಾಯಗೊಂಡಿದ್ದರಿಂದ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಜಿಲ್ಲಾ ಪಂಚಾಯತ್,
ತುಮಕೂರು.